ತಂದಿದ್ದಾರೆ. ರೋಸ್ಟರ್ ಪದ್ಧತಿಯನ್ನು ಸ್ಟ್ರಿಕ್ಟ್ ಆಗಿ ಫಾಲೋ ಮಾಡುತ್ತಿರುವುದು ೧೯೯೦ ರಿಂದೀಚೆಗೆ. ೧೯೮೭ ಕ್ಕಿಂತ ಮೊದಲು ರೋಸ್ಟರ್ ಪದ್ದತಿಯಲ್ಲಿ ನಿಲ್ ರಿಪೋರ್ಟ್ ತಂದರೆ ಹೈಸ್ಕೂಲ್ ಕೊಡಬೇಕೆಂದು ಕಾನೂನು ಇದೆ. ಆ ಕಾನೂನು ಪ್ರಕಾರ ೬೭ ಹೈಸ್ಕೂಲುಗಳಿಗೆ ಅನುದಾನ ಕೊಡುವಂಥ ವ್ಯವಸ್ಥೆಯನ್ನು ಮಾಡುತ್ತೇವೆಂದು ನಿನ್ನೆ ಕೌನ್ಸಿಲ್‌ನಲ್ಲಿ ಸ್ಟೇಟ್‌ಮೆಂಟ್ ಮಾಡಿದ್ದೇನೆ. ಇನ್ನು ಎಲ್ಲ ಹೈಸ್ಕೂಲುಗಳಿಗೆ ಏನು ನ್ಯೂನತೆಗಳಿವೆ ಅದನ್ನು ಸರಿಪಡಿಸಿಕೊಂಡು ವಿವರಣೆ ತೆಗೆದು ಕೊಂಡು ಬಂದರೆ ಆದಷ್ಟು ಬೇಗ ಅನುಕೂಲ ಒದಗಿಸಿಕೊಡುತ್ತೇವೆ. ೬ ತಿಂಗಳು ವರ್ಷ, ಎರಡು ವರ್ಷ ಎಂದು ಹೇಳುತ್ತಿಲ್ಲ. ಅವರಿಂದ ವಿವರಣೆ ಪಡೆದುಕೊಂಡು ಆದಷ್ಟು ಬೇಗ ಕ್ರಮ ಕೈಗೊಳ್ಳುತ್ತೇವೆ. ನಿನ್ನೆಯೂ ಕೂಡ ನಾನು ನಮ್ಮ ಅಧ್ಯಾಪಕರುಗಳು ಏನು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ ಅವರಿಗೆ ಮನವಿ ಮಾಡಿದ್ದೇನೆ. ದಯವಿಟ್ಟು ಉಪವಾಸ ನಿಲ್ಲಿಸಿ, ನೀವು ಸ್ವಲ್ಪ ದಿನಗಳಲ್ಲಿ, ಒಂದು ತಿಂಗಳೊಳಗೆ ಆ ವಿವರಣೆಗಳನ್ನು ನಮಗೆ ಕೊಟ್ಟರೆ ನಾವು ಅನುದಾನ ಬಿಡುಗಡೆ ಮಾಡುವಂಥ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದೇನೆ. ಅವರು ವಿವರಣೆಗಳನ್ನು ಕೊಡಬೇಕಾಗುತ್ತದೆ. ಈ ಸದನದ ಮೂಲಕ ಅವರಲ್ಲಿ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತಿದ್ದೇನೆ, ತಾವು ಶ್ರೇಷ್ಠ ಹುದ್ದೆಯಲ್ಲಿರುವವರು. ವಿದ್ಯಾರ್ಥಿಗಳಿಗೆ ಅನಾನುಕೂಲವಾಗುತ್ತಿದೆ. ಪರೀಕ್ಷೆ ಬರುತ್ತಿದೆ, ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಿ ತಮ್ಮ ತಮ್ಮ ಕೆಲಸಗಳಿಗೆ ಹೋಗಬೇಕು, ನಾನು ಅವರಿಗೆ ಅನುಕೂಲತೆ ಮಾಡಿಕೊಡುತ್ತೇನೆಂದು ಈ ಸದನದ ಮೂಲಕ ಅವರಿಗೆ ಆಶ್ವಾಸನೆ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ವಿವರಣೆ ಸಾಧುವಾಗಿರಬೇಕು. ಕೊಡಲಾರದ ವಿವರಣೆಗಳನ್ನು ಕೇಳಿದರೆ ಒಂದು ತಿಂಗಳಲ್ಲಿ ಕೊಡುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು. ಸ್ಕೂಲ್ ಕೊಡುವಾಗ ಯಾವ ಕಂಡೀಷನ್ ಇರುತ್ತದೆ ಆ ಪ್ರಕಾರ ಆಗುತ್ತದೆ.

ನಿಲುವಳಿ ಸೂಚನೆ

ವಿಷಯ:- ರಾಜ್ಯದ ರೇಷ್ಮೆ ಬೆಲೆಯಲ್ಲಿ ಕುಸಿತ

ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):- ಮಾನ್ಯ ಅಧ್ಯಕ್ಷರೆ, ಯಾವ ಸಮಸ್ಯೆಗಳಿಗೆ ಅಗ್ರಸ್ಥಾನ ಸಲ್ಲಬೇಕೋ ಅವರಿಗೆ ಕೊನೆಯಪಕ್ಷ ಕೊನೆಯಸ್ಥಾನ ಸಲ್ಲಿದ್ದುದು ಸಂತೋಷ. ಅಧ್ಯಕ್ಷರು ರೈತರ ಸಮಸ್ಯೆ ಎತ್ತಲಿಕ್ಕೆ ನನಗೆ ಅವಕಾಶ ಮಾಡಿ ಕೊಟ್ಟಿದ್ದಕ್ಕೆ ನಾನು ಅವರಿಗೆ ವಂದಿಸುತ್ತೇನೆ. ಈ ದಿವಸ ಈ ರಾಜ್ಯದ ರೇಷ್ಮೆ ಉದ್ಯಮ ರಾಷ್ಟ್ರದ ರೇಷ್ಮೆ ಉದ್ಯಮವಾಗುತ್ತಿದೆ. ಏಕೆಂದರೆ ಭಾರತ ದೇಶಕ್ಕೆ ರೇಷ್ಮೆ ಉದ್ಯಮದಲ್ಲಿ ಕರ್ನಾಟಕದ ಕೊಡುಗೆ ಅಥವಾ ದೇಣಿಗೆ ಅತ್ಯಂತ ಹೆಚ್ಚಿನದು. ಕರ್ನಾಟಕ ಯಾವುದಾದರೂ ವಿಷಯದಲ್ಲಿ ಪ್ರಥಮ ಸ್ಥಾನದಲ್ಲಿದ್ದರೆ ಅದು ರೇಷ್ಮೆ ಉದ್ಯಮದಲ್ಲಿ. ಈ ಉದ್ಯಮ ಮಾಡುವ ಜನಗಳು ಅತ್ಯಂತ ಸಂಕಷ್ಟಕ್ಕೆ ಸಿಲುಕಿರುವಂಥ ಸಂದರ್ಭದಲ್ಲಿ ಅದನ್ನು ನಿವಾರಣೆಮಾಡಲಿಕ್ಕೆ ಈ ಸದನದ ಮೂಲಕ ಮತ್ತು ತಮ್ಮ ಮೂಲಕ ಸರ್ಕಾರದ ಗಮನ ಸೆಳೆಯುವುದಕ್ಕೆ ನಾವು ಈ ನಿಲುವಳಿ ಸೂಚನೆಯನ್ನು ತಂದಿದ್ದೇವೆ.

ಮಾನ್ಯ ಅಧ್ಯಕ್ಷರೆ, ಈಗಾಗಲೇ ಹೇಳಿದಂತೆ ಸುಮಾರು ಹತ್ತು ಲಕ್ಷ ಕುಟುಂಬಗಳು ಈ ಉದ್ಯಮವನ್ನು ಆಧಾರ ಮಾಡಿಕೊಂಡು ಭಾರತ ದೇಶದಲ್ಲಿ ಜೀವನ ಮಾಡುತ್ತಿವೆ. ಕರ್ನಾಟಕದಲ್ಲಿ ೩-೪ ಲಕ್ಷ ಕುಟುಂಬಗಳು ರೇಷ್ಮೆ ಉದ್ಯಮದಿಂದ ಬದುಕುತ್ತಿವೆ. ಅದರಲ್ಲೂ ಕೆಲವು ಜಿಲ್ಲೆಗಳಲ್ಲಿ ಬಡವರಿಗೆ ಎರಡು ಹೊತ್ತಿನ ಅನ್ನ, ಮೈಗೆ ಬಟ್ಟೆ ದೊರಕಿಸಿಕೊಡುವಂಥ ಒಂದೇ ಉದ್ಯಮ ಅಂದರೆ ರೇಷ್ಮೆ ಉದ್ಯಮ. ಇಂಥ ಉದ್ಯಮಕ್ಕೆ ಇತ್ತೀಚಿನ ವರ್ಷಗಳಲ್ಲಿ ಮಾರಿಯಂಥ ರೋಗ ಬಂದು ಬೆಳೆಗಾರರಿಗೆ ಮತ್ತು ಉದ್ದಿಮೆಗೆ ಹೆಚ್ಚಿನ ತೊಂದರೆ ಕೊಟ್ಟಿದ್ದು ನಿಜ. ಈ ತೊಂದರೆಯನ್ನು ನಿವಾರಣೆ ಮಾಡಿ ಸರ್ಕಾರ ಮತ್ತು ಇಲಾಖೆಯವರು ಉದ್ಯಮವನ್ನು

ಅಭಿವೃದ್ಧಿ ಪಥದಲ್ಲಿ ತೆಗೆದುಕೊಂಡು ಹೋಗಬೇಕೆಂಬ ನಿಖರವಾದ ನಿರ್ದಿಷ್ಟವಾದ ಯೋಜನೆಗಳನ್ನು ರೂಪಿಸಿಕೊಂಡ ಸಂದರ್ಭದಲ್ಲಿ ಸರ್ಕಾರದ ತಪ್ಪು ನೀತಿಯಿಂದ ರೇಷ್ಮೆ ಗೂಡಿನ ಬೆಲೆ ಅತ್ಯಂತ ಕನಿಷ್ಠ ಮಟ್ಟಕ್ಕೆ ಇಳಿದುಹೋಗಿದೆ. ಕಳೆದ ವರ್ಷ ಫೆಬ್ರವರಿ ತಿಂಗಳಲ್ಲಿ ಇದ್ದ ಬೆಲೆ ೧೯೦೦ ರೂಪಾಯಿಗಳು. ಈ ವರ್ಷ ರೇಷ್ಮೆಗೆ ಇರುವ ಬೆಲೆ ಕೇವಲ ೫೫೦ ರಿಂದ ೬೦೦ ರೂಪಾಯಿಗಳು. ಗೂಡಿನ ಬೆಲೆ ೧೦೦ ಕ್ಕಿಂತಲೂ ಹೆಚ್ಚು ಇದ್ದದ್ದು ೫೦ ರೂಪಾಯಿಗೆ ಇಳಿದಿದೆ. ಮಾನ್ಯ ಅಧ್ಯಕ್ಷರೇ, ಈ ವಿಷಯ ಬಹುಶಃ ಒಂದು ಪಕ್ಷಕ್ಕೆ ಅಥವಾ ನನಗೆ ಒಬ್ಬನಿಗೇ ಸಂಬಂಧಪಟ್ಟಿದ್ದುದು ಅಲ್ಲ. ಆ ಕಡೆ ಮುಂದಿನ ಸಾಲಿನಲ್ಲಿರುವ ಅನೇಕ ಜನ ಸ್ನೇಹಿತರೂ ನೇರವಾಗಿ, ನಿಕಟವಾಗಿ ಈ ಉದ್ಯಮದಲ್ಲಿ ಸಂಬಂಧ ಹೊಂದಿದ್ದಾರೆ. ಅದರಲ್ಲೂ ಚೌಡರೆಡ್ಡಿಯವರು ಕೂಡ ಹುಳ ಸಾಕುತ್ತಾರೆಂದು ಭಾವಿಸುತ್ತೇನೆ. ಬಹಳ ಜನ ಸದಸ್ಯರು ಹುಳ ಸಾಕುವವರು ಇದ್ದಾರೆ, ಬೆಳೆ ಮಾಡುವವರು ಇದ್ದಾರೆ, ಸೊಪ್ಪು ಕೀಳುವವರು ಇದ್ದಾರೆ. ಈ ಬೆಲೆ ಇಷ್ಟೊಂದು ಕಡಿಮೆ ಆಗಿರುವುದಕ್ಕೆ ಕಾರಣವೇನು? ಸರ್ಕಾರ ಈ ಬಗ್ಗೆ ಏನು ಮಾಡುತ್ತಿದೆ? ಮತ್ತೆ ಇದು ಏಕೆ ಕಡಿಮೆಯಾಯಿತು? ಇಷ್ಟು ಹೊತ್ತಿನವರೆಗೆ ಎಲ್ಲಾ ವಸ್ತುಗಳ ಬೆಲೆ ಹೆಚ್ಚಾಯಿತು ಎಂದು ನನ್ನ ಸ್ನೇಹಿತರು ತುಂಬಾ ಗಲಾಟೆ ಮಾಡುತ್ತಿದ್ದರು. ಮತ್ತೆ ಚಂದ್ರೇಗೌಡರು ಮಾತನಾಡಿ ಮಂತ್ರಿಗಳ ಬೆಲೆ ಕಡಿಮೆ ಆಗಿದೆ ಎಂದು ಹೇಳಿದರು. ನಾನು ಗಲಾಟೆ ಮಾಡುತ್ತಿರುವುದು ವ್ಯಕ್ತಿಯ ಬೆಲೆ ಅಥವಾ ಯಾವುದೋ ವಸ್ತುವಿನ ಬೆಲೆ ಬಗ್ಗೆ ಅಲ್ಲ. ಇವತ್ತು ರೇಷ್ಮೆ ಬೆಲೆ ಕಡಿಮೆ ಆಗುತ್ತಾ ಇದೆ. ಇದನ್ನು ನನ್ನ ನಿಲುವಳಿ ಸೂಚನೆಯಲ್ಲಿ ಸ್ಪಷ್ಟವಾಗಿ ತಿಳಿಸಿದ್ದೇನೆ. ಈ ಬೆಲೆ ಕಡಿಮೆ ಆಗುವುದಕ್ಕೆ ಸರ್ಕಾರದ ತಪ್ಪು ನೀತಿಯೇ ಕಾರಣ. ಸನ್ಮಾನ್ಯ ಅಧ್ಯಕ್ಷರೇ, ಈ ರೇಷ್ಮೆ ಉದ್ಯಮದಲ್ಲಿ ರೇಷ್ಮೆ ಬೆಲೆ ಹೆಚ್ಚಾದಾಗ ಹೊರ ದೇಶಗಳಿಂದ ರೇಷ್ಮೆ ತರಿಸಿಕೊಳ್ಳುವ ಪರಿಪಾಠ ಮೊದಲಿನಿಂದಲೂ ನಡೆದಿದೆ. ಬ್ರಿಟೀಷರ ಕಾಲದಿಂದ ಇಲ್ಲಿಯವರೆಗೆ ಇದು ನಡೆದಿದೆ. ಈ ರೇಷ್ಮೆಯನ್ನು ಹೊರದೇಶದಿಂದ ಆಮದು ಮಾಡಿಕೊಳ್ಳುವುದಕ್ಕೆ ಕಾರಣ ಏನೆಂದರೆ, ಮೊದಲನೆಯದು to arrest the price ಬೆಲೆ ಕಡಿಮೆ ಮಾಡುವುದು. ಎರಡನೆಯ ಕಾರಣ ಏನೆಂದರೆ, ರೇಷ್ಮೆ ಸಿಕ್ಕದೇ ಇದ್ದಾಗ. ನಾನು ಈ ಸದನದ ಮೂಲಕ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈ ಎರಡೂ ಪರಿಸ್ಥಿತಿ ಈ ರಾಷ್ಟ್ರದಲ್ಲಿ ಇವತ್ತು ಇದೆಯೇ? You are importing the silk uunder the pretext to arrest the prices and when the silk is not available, I would like to know from the Government whether these two things are existing today?

ಸನ್ಮಾನ್ಯ ಅಧ್ಯಕ್ಷರೇ, ರೇಷ್ಮೆ ಇವತ್ತು ಇಲ್ಲ ಎನ್ನುವ ಪರಿಸ್ಥಿತಿ ಇಲ್ಲ. ಕರ್ನಾಟಕ ಒಂದರಲ್ಲೇ, ನನ್ನ ಮಾಹಿತಿ ನಿಜವಾದರೆ ಸುಮಾರು ೭೫ ಕೋಟಿ ರೂಪಾಯಿ ಬೆಲೆ ಬಾಳುವ ರೇಷ್ಮೆ ದಾಸ್ತಾನು ಇದೆ. ಇದನ್ನು ಮಾನ್ಯ ಮಂತ್ರಿಗಳು ಒಪ್ಪುತ್ತಾರೋ ಬಿಡುತ್ತಾರೋ ಗೊತ್ತಿಲ್ಲ. ಸುಮಾರು ೭೦ ರಿಂದ ೧೦೦ ಕೋಟಿಯಷ್ಟು ಇರಬಹುದು. ಸುಮಾರು ೧೦೦ ಕೋಟಿ ರೂಪಾಯಿಗಳಷ್ಟು ರೇಷ್ಮೆ ಈ ರಾಜ್ಯದ ಮಳಿಗೆಯಲ್ಲಿ ಬಿದ್ದು ಕೊಳೆತಿರುವಾಗ, ಈ ರಾಷ್ಟ್ರವನ್ನು ಆಳುತ್ತಿರುವ ಜನರು ರೇಷ್ಮೆಯನ್ನು ಹೊರದೇಶಗಳಿಂದ ತರಿಸುವುದು ಹೆಡ್ಡತನವೇ, ದಡ್ಡತನವೇ, ಬೆಪ್ಪುತನವೇ? ಏನೆಂದು ಕರೆಯಬೇಕು? ಈ ರಾಜ್ಯದ ರೈತರು ಬೆಳೆದ ಗೂಡಿಗೆ ೫೫ ರೂಪಾಯಿ ಬೆಲೆ ಇರುವಾಗ, ೭೦-೮೦ ಕೋಟಿ ರೂಪಾಯಿ ಬೆಲೆಯ ರೇಷ್ಮೆಯ ದಾಸ್ತಾನು ಕೊಳೆಯುತ್ತಿರುವಾಗ ಈ ರಾಷ್ಟ್ರವನ್ನು ಆಳುತ್ತಿರತಕ್ಕ ಜನರಿಗೆ ಹೊರದೇಶದ ರೇಷ್ಮೆ ವ್ಯಾಮೋಹ. ಸನ್ಮಾನ್ಯ ಅಧ್ಯಕ್ಷರೇ, ಅಷ್ಟೇ ಅಲ್ಲ. ಸರ್ಕಾರವಲ್ಲಿ ಇರುವ ದಾಸ್ತಾನಿನ ಜೊತೆಗೆ ೫೦೦ ಅಡಿ ನೆಲವನ್ನು ಕೊರೆದರೂ ನಮಗೆ ನೀರು ಬರುತ್ತಿಲ್ಲ. ಬಹುಶಃ ಇವತ್ತು ಯಾರು ತೋಟಕ್ಕೆ ಹೋಗಿ ನೋಡಿದರೆ ಅಲ್ಲಿ ನೀರಿಗಿಂತ ಕಣ್ಣೀರು ಜಾಸ್ತಿ ಸಿಗುತ್ತದೆ. ಒಂದು ಬೋರ್ವೆಲ್ ಮೆಷಿನ್ ಆನ್ ಮಾಡಿ ನೀರು ಕಟ್ಟಲು ಹೋಗುವಷ್ಟು ಹೊತ್ತಿಗೆ ಅದು ಆಫ್ ಆಗಿರುತ್ತದೆ. ಇವತ್ತು ಬೋರ್ವೆಲ್ ನೀರಿಗಿಂತ ಕಣ್ಣೀರೇ ಜಾಸ್ತಿ. ಒಂದುಕಡೆ ಇದಾದರೆ ಇನ್ನೊಂದು ಕಡೆ ಈ ರಾಷ್ಟ್ರದ ಪ್ರತಿಯೊಬ್ಬರಿಗೂ

ಗೊತ್ತಿರುವಹಾಗೆ ಗೊಬ್ಬರದ ಬೆಲೆ ಜಾಸ್ತಿಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಗೊಬ್ಬರದ ಬೆಲೆ ಜಾಸ್ತಿಯಾಗಿರುವಾಗ, ನೀವು ವ್ಯವಸಾಯ ಮಾಡುತ್ತೀರೋ ಇಲ್ಲವೋ ಏನು ಮಾಡುತ್ತೀರೋ ನನಗೆ ಗೊತ್ತಿಲ್ಲ. ಒಬ್ಬ ಆಳಿಗೆ, ಅವನ ಮನೆಯ ಹತ್ತಿರ ಟ್ರಾಕ್ಟರ್ ತೆಗೆದುಕೊಂಡು ಹೋಗಿ ಅವನನ್ನು ಕರೆದುಕೊಂಡು ಮಧ್ಯಾಹ್ನ ಚಿತ್ರಾನ್ನ ಕೊಟ್ಟು ಸಂಜೆ ಬಿಟ್ಟು ಬರುವಾಗ ಆತನಿಗೆ ೮೦ ರೂಪಾಯಿ ಕೊಡಬೇಕು. Under these circumstances, Can we offer to sell cocoon at 55 Rs. per kg. ಪರಿಸ್ಥಿತಿ ಹೀಗಿರುವಾಗ ಈ ಸರ್ಕಾರಕ್ಕೆ ಹೃದಯ ಇದೆಯೇ? ಮತ್ತು ಬುದ್ಧಿ ಇದೆಯೇ?

ಆದ್ದರಿಂದ ತಾವೇನೋ ಹೊರದೇಶದಿಂದ ರೇಷ್ಮೆಯನ್ನು ಆಮದು ಮಾಡಿಕೊಳ್ಳುತ್ತಿದ್ದೇವೆಂದು ಹೇಳುತ್ತೀರಿ. ನಮ್ಮಲ್ಲಿ ಸಿಲ್ಕ್ ಇಲ್ಲವೆಂದು ಹೇಳುವಂತಹ ಪರಿಸ್ಥಿತಿ ಇಲ್ಲ. ಬೆಲೆ ಜಾಸ್ತಿ ಯಾಗಿದೆಯೆಂದು ನಾನು ಹೇಳುತ್ತಿದ್ದೇನೆ. ಹಿಂದೆಯೂ ಕೂಡ ಈ ಪರಿಸ್ಥಿತಿ ಇರಲಿಲ್ಲ. ಮತ್ತು ಏಕೆ ಇವರು ಆಮದು ಮಾಡಿಕೊಳ್ಳುತ್ತಾರೆ? ಈ ರಾಷ್ಟ್ರದ ರೇಷ್ಮೆ ಉದ್ಯಮಕ್ಕೆ ಕಂಠಕವಾಗಿರತಕ್ಕ ಈ ನೀತಿ ಏಕೆ? ಬಹುಶಃ ಕಾಂಗ್ರೆಸ್ ಪಕ್ಷದವರು ಆಡಳಿತ ಮಾಡುತ್ತಿದ್ದಾರೆ ಈಗ ಮಾತ್ರ ಇದೆಯೆಂದು ನಾನು ಅನ್ನುವುದಿಲ್ಲ. ಅಷ್ಟು ಸಣ್ಣತನದ ಹೇಳಿಕೆ ಕೊಡುವುದಕ್ಕೆ ನನಗೆ ಇಷ್ಟವಿಲ್ಲ. ನನ್ನದೇ ಜನತಾಪಕ್ಷ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗಲೂ ಕೂಡ ಈ ನೀತಿಯನ್ನು ಪರಿಪಾಲನೆ ಮಾಡಿದ್ದಾರೆ. ಇಂತಹ ಅನಿಷ್ಟವಾದಂತಹ ಪದ್ಧತಿಯನ್ನು ನಡೆಸಿಕೊಂಡು ಬಂದರು. ಜನತಾದಳದ ಸರ್ಕಾರ ಬಂದಾಗಲೂ ಕೂಡ ಮಾಡಿದರು. ಇವತ್ತು ಕಾಂಗ್ರೆಸ್‌ನವರು ಮಾಡುತ್ತಿದ್ದಾರೆ. ಆದ್ದರಿಂದ ಇದನ್ನು ಪಕ್ಷಾತೀತದೃಷ್ಟಿಯಿಂದ ನೋಡಬೇಕೆಂದು ನನ್ನ ಸ್ನೇಹಿತರಲ್ಲಿ ಕೇಳಿಕೊಳ್ಳುತ್ತೇನೆ. ಹೊರದೇಶದಿಂದ ರೇಷ್ಮೆಯನ್ನು ಆಮದು ಮಾಡಿಕೊಳ್ಳುವುದಕ್ಕೆ ಮೂರು ವಿಧವಾದ ವ್ಯವಸ್ಥೆ ಇದೆ. ಒಂದು ರಿಪ್ಲೆನಿಷ್ಮೆಂಟ್ ಸ್ಕೀಮ್. ಇದರಲ್ಲಿ ಮೊದಲು ೨೦ ಪರ್ಸೆಂಟ್ ಇತ್ತು ಈಗ ಅದನ್ನು ೬೦ ಪರ್ಸೆಂಟ್ ಮಾಡಿದ್ದಾರೆ. ಇನ್ನೊಂದು ಅಡ್ವಾನ್ಸ್ ಲೈಸೆನ್ಸಿಂಗ್ ಸಿಸ್ಟಮ್, ಮತ್ತೊಂದು ಅಡ್ಹಾಕ್ ಆರೆಂಜ್‌ಮೆಂಟ್. ಈ ಮೂರು ಕಾರಣಗಳಿಗೋಸ್ಕರ ರೇಷ್ಮೆಯನ್ನು ಹೊರದೇಶದಿಂದ ನಮ್ಮ ದೇಶಕ್ಕೆ ತರಿಸುತ್ತಿದ್ದಾರೆ. ನಾನು ಆಗಲೇ ಹೇಳಿದ್ದೇನೆ ಮೊದಲನೆಯ ಕಾರಣ to arrest the price ಇದು ನಿಜವೆ? ನಿಜವಲ್ಲ, ಏಕೆಂದರೆ ರೇಷ್ಮೆಯ ಬೆಲೆ ಭಾರತದೇಶದಲ್ಲಿ ನೆಲವನ್ನು ಕಚ್ಚಿ It has reached the lowest denomination, so the price hike silk as justification will not hold good. ನಮ್ಮಲ್ಲಿ ರೇಷ್ಮೆ ಇಲ್ಲವೆ? ಮಂತ್ರಿಗಳು ಹೇಳಲಿ, ಇದೆಯೋ ಇಲ್ಲವೋ ಎಂದು. ೭೦-೮೦ ಕೋಟಿ ರೂಪಾಯಿಗಳ ರೇಷ್ಮೆ ಇದೆ. Why are you importing? ..ರೇಷ್ಮೆ ಬೆಲೆ ಜಾಸ್ತಿಯಾದದ್ದರಿಂದ ರೇಷ್ಮೆಯನ್ನು ಹೊರದೇಶದಿಂದ ಆಮದು ಮಾಡಿಕೊಳ್ಳುತ್ತಿದ್ದೇವೆಂದು ಹೇಳುವಂಥಹದ್ದು ಕೇಂದ್ರ ಸರ್ಕಾರದ ಪರಿಪಾಠ, ಅದು ನಿಜವೆ? ಎಷ್ಟು ಜಾಸ್ತಿಯಾಗಿದೆ ರೇಷ್ಮೆ ಬೆಲೆ? ತಮ್ಮ ಗಮನಕ್ಕೆ ಮತ್ತು ಸದನದ ಗಮನಕ್ಕೆ ರೇಷ್ಮೆ ಬೆಲೆ ಎಷ್ಟು ಜಾಸ್ತಿಯಾಗಿದೆ ಎನ್ನುವುದನ್ನು ತರುತ್ತಿದ್ದೇವೆ. ಕೇಂದ್ರಸರ್ಕಾರದವರು ಮಾಡಿರುವಂತಹ ಒಂದು ವಿಶ್ಲೇಷಣೆಯ ಪ್ರಕಾರ ಕಾಟನ್ ೧೭ ಪರ್ಸೆಂಟ್ ಜೂಟ್ ೧೨೨ ಪರ್ಸೆಂಟ್ ಆದರೆ ಸಿಲ್ಕ್ ಬೆಲೆ ೨.೨ ಪರ್ಸೆಂಟ್ ಆಯಿತು, then how could they justify the price hike in respect of silk? So, to have superior quality for manufacturing to export quality....ಆವೊಂದು ಕಾರಣವನ್ನು ಕೇಂದ್ರ ಸರ್ಕಾರದವರು ಕೊಡುತ್ತಿದ್ದಾರೆ. ಅದು ಸರಿಯಾದ ಕಾರಣವಲ್ಲವೆಂದು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೊಂದು ಕಾರಣ ಏನು ಕೊಡುತ್ತಾರೆಂದರೆ core silk, fine silk....ಹೊರದೇಶಗಳಿಗೆ ನಾವೇನು ರಫ್ತು ಮಾಡುತ್ತಿದ್ದೇವೆ, ರಫ್ತು ಮಾಡುವಂತಹ ಬಟ್ಟೆಯನ್ನು ಒಳ್ಳೆಯ ಗುಣಮಟ್ಟದ ರೇಷ್ಮೆಯಿಂದ ತಯಾರು ಮಾಡಬೇಕು. ಅದಕ್ಕೆ ಉತ್ತಮವಾದ ರೇಷ್ಮೆಯನ್ನು ಹೊರದೇಶದಿಂದ ನಾವು ಆಮದು ಮಾಡಿಕೊಳ್ಳುತ್ತಿದ್ದೇವೆಂದು ಹೇಳುತ್ತಾರೆ. ಇದಕ್ಕೂ ಕೂಡ ಕಾರಣವಿಲ್ಲ. ನಾವು

ಹೊರದೇಶಕ್ಕೆ ರಫ್ತು ಮಾಡುತ್ತಿರುವ ಬಟ್ಟೆ ಈವೊಂದು ಸಿಲ್ಕ್‌ನಿಂದ ತಯಾರು ಮಾಡಿದ್ದಲ್ಲ. ನಾವು ಹೊರದೇಶಕ್ಕೆ ರಫ್ತು ಮಾಡುತ್ತಿರುವ ವಸ್ತು ಕೋರ್ ಸಿಲ್ಕ್‌ನಿಂದ ಮಾಡುವಂತಹ ಒರಟಾದ ಬಟ್ಟೆ. ಫೈನ್ ಸಿಲ್ಕ್‌ನಿಂದ ತಯಾರು ಮಾಡುವಂತಹ ಬಟ್ಟೆಯನ್ನು ಹೊರದೇಶಕ್ಕೆ ನಾವು ಕಳುಹಿಸುತ್ತಿಲ್ಲ. ಆದಕ್ಕೆ ಸಿಲ್ಕ್ ಎಕ್ಸ್ ಪೋರ್ಟ್ ಪ್ರಮೋಷನ್ ಕೌನ್ಸಿಲ್‌ನವರು, ಅದು ಕೇಂದ್ರಸರ್ಕಾರದ್ದೆ; ಅವರು ಏನನ್ನು ಎಕ್ಸ್ ಪೋರ್ಟ್ ಮಾಡುತ್ತಿದ್ದೇವೆಂದು ಹೇಳಿದ್ದಾರೆ. Today India exports wide varieties of silk to Western Europe and the United Nations especially finished fabrics by weavers from Andhara Pradesh and Orissa according to you.... ಹೊರದೇಶಕ್ಕೆ ಕಳಿಸುವಂಥ ಉತ್ತಮ ದರ್ಜೆಯ ಬಟ್ಟೆ ತಯಾರುಗೊಳಿಸುವುದಕ್ಕೆ ಚೈನಾಸಿಲ್ಕ್‌ನ್ನು ಇಂಪೋರ್ಟ್ ಮಾಡುತ್ತೇವೆ ಎಂದು ಕೇಂದ್ರಸರ್ಕಾರ ಏನು ಹೇಳಿದೆಯೆಲ್ಲ, ಅದೂ ಕೂಡ ಸತ್ಯ ಅಲ್ಲ. ಏಕೆಂದರೆ, What you are exporting is not a fine silk, It is a core silk. So, the reasoning of the Central Government is not correct. ಸನ್ಮಾನ್ಯ ಅಧ್ಯಕ್ಷರೇ, ಆಮದು ಮಾಡಿದಂಥ ರೇಷ್ಮೆಯನ್ನು ರಫ್ತು ಮಾಡುವಂಥ ಬಟ್ಟೆಗಳನ್ನು ತಯಾರು ಮಾಡಲಿಕ್ಕೆ ಉಪಯೋಗಿಸಿದ್ದಾರೆಯೇ ಇಲ್ಲವೇ ಎನ್ನುವುದನ್ನು ಕಂಡು ಹಿಡಿಯುವುದಕ್ಕೆ ಯಾವುದೇ ವ್ಯವಸ್ಥೆ ಇಲ್ಲ. The Central Government has not established any authority to check whether the imported silk is being used for the manufacture of the export quality cloth.. ಇದೆಲ್ಲದಕ್ಕಿಂತಲೂ ಹೆಚ್ಚಾಗಿ ಈ ಇಂಪೋರ್ಟೆಡ್ ಸಿಲ್ಕ್‌ನ್ನು ನಿಜವಾಗಿಯೂ ಎಕ್ಸ್‌ಪೋರ್ಟ್ ಮಾಡುವಂಥ ಬಟ್ಟೆಗೆ ಉಪಯೋಗವಾಗುತ್ತದೆಯೆ? ಇದು ಉಪಯೋಗವಾಗುತ್ತಿಲ್ಲ ಎಂದು. ೧೯೮೬ನೇ ಇಸವಿಯಲ್ಲಿಯೇ ಇದರ ದುರುಪಯೋಗವಾಗುತ್ತಿದೆ ಎಂದು ಕೇಂದ್ರ ಸರ್ಕಾರ ಒಪ್ಪಿಕೊಂಡಿದೆ. ಇದನ್ನು ನಾನು ಈ ಸದನದ ಮೂಲಕ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. Over 3300 kilogram of imported raw silk had been misused and not used for the export, the Lok Sabha was informed today. So, there is clear admission by the then Hon'ble Minister for Textile. What is the action taken against these traders? There is a clear admission in the Parliament by the then Textile Minister that there is a misuse of the silk imported into the country. What is the action taken. No action- perhaps the import has increased. ಅಷ್ಟೇ ಅಲ್ಲ ನಮ್ಮ ಮಾಜಿ ಪ್ರಧಾನಮಂತ್ರಿಗಳಾದ our earlier commerce Minister of GOI Sri V.P. Singh has also written to us- I will request the Hon'ble Minister to go through the file whether there is such an admission ಬೇಕಾದರೆ ಅದನ್ನು ತರಿಸಿ ನೋಡಲಿ. ರಾಷ್ಟ್ರದ ಆವತ್ತಿನ ಕಾಮರ್ಸ್ ಮಂತ್ರಿಗಳು ಈ ದೇಶದಲ್ಲಿ ಆಮದಾಗುತ್ತಿರುವ ರೇಷ್ಮೆಯ ದುರುಪಯೋಗವಾಗುತ್ತಿದೆ ಎಂದು ಹೇಳಿದರು. ಅಷ್ಟೇ ಅಲ್ಲ, ನಮ್ಮ ಕರ್ನಾಟಕ ರಾಜ್ಯದವರಾದಂಥ ಶ್ರೀಮಾನ್ ಬಸವಯ್ಯನವರು ಹಿಂದೆ ಒಂದು ಸಾರಿ ಈ ದೇಶಕ್ಕೆ ಬರುತ್ತಾ ಇರತಕ್ಕಂಥ ರೇಷ್ಮೆ ದುರುಪಯೋಗವಾಗುತ್ತಿದೆ ಎಂದು ಸ್ಪಷ್ಟವಾಗಿ ಒಪ್ಪಿಕೊಂಡಿದ್ದಾರೆ. ಭಾರತ ಕಚ್ಚಾರೇಷ್ಮೆಯನ್ನು ಆಮದುಮಾಡಿಕೊಳ್ಳುವ ಅಗತ್ಯವಿಲ್ಲ. ಆಮದು ಮಾಡಿಕೊಂಡರೂ ಸ್ಟೇಟ್ ಟ್ರೇಡಿಂಗ್ ಕಾರ್ಪೋರೇಷನ್ ಮೂಲಕ ಮಾಡಿಕೊಳ್ಳಬೇಕು. ೧೮ ವರ್ಷಗಳಾದರೂ ಈ ಚಾಳಿ ಹೋಗಲಿಲ್ಲ. ಇದನ್ನು ನಾನು ತಮ್ಮ ಮೂಲಕ ಸರ್ಕಾರದ ಗಮನಸೆಳೆಯಲಿಕ್ಕೆ ಬಯಸುತ್ತಿದ್ದೇನೆ. ಬೆಲೆ ಜಾಸ್ತಿಯಾದಾಗ ಈ ವಸ್ತುಗಳನ್ನು ಆಮದು ಮಾಡಿಕೊಳ್ಳುತ್ತೇವೆ ಎಂದು ಏನು ಹೇಳುತ್ತಾರೆ, ಆ ಒಂದು ಸಂದರ್ಭ ಇವತ್ತು ಇಲ್ಲ. ಉತ್ತಮವಾದ ಗುಣಮಟ್ಟದ ರೇಷ್ಮೆಗಾಗಿ

ಆಮದು ಮಾಡಿಕೊಳ್ಳುತ್ತೇವೆ ಎಂದು ಏನು ಹೇಳುತ್ತಾರೋ ಅದಕ್ಕೂ ಕೂಡ ಅವಕಾಶ ಇಲ್ಲ. ಬೆಲೆ ಜಾಸ್ತಿಯಾಯಿತೆಂದು ಇಟ್ಟುಕೊಳ್ಳೋಣ. ಆವತ್ತಿನ ಪರಿಸ್ಥಿತಿ ಈಗ ಇಲ್ಲ. ಬೆಲೆ ಜಾಸ್ತಿ ಇರುವಂಥ ಎಲ್ಲಾ ವಸ್ತುಗಳನ್ನು ಆಮದು ಮಾಡಿಕೊಳ್ಳುವುದಕ್ಕೆ ಅಪ್ಪಣೆ ಕೊಡುವುದಾದರೆ ರೈತನ ಬೆಳೆಗೂ ಕೂಡ ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ೧೯೭೫-೭೬ನೇ ಇಸವಿಯಲ್ಲಿ ನಾನು ಅಂಬಾಸಿಡರ್ ಕಾರನ್ನು ೨೬ ಸಾವಿರ ರೂಪಾಯಿಗೆ ಕೊಂಡು ಕೊಂಡಿದ್ದೆ. Assuming for the argument sake-what is the cost of the car today. The cost of the Ambassador Car is 2 lakhs and odd. Can this Government allow import of cars to this country. What is the increased cost of the match box, what is the increase in the cost of soap, cloth-it is abnormal. It is beyond any justification.

ಆದರೂ ಕೂಡ ಈ ಸರ್ಕಾರ, ಇದನ್ನು ಹೊರದೇಶದಿಂದ ಆಮದು ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡುವುದಿಲ್ಲ, ಇದು ಏಕೆ ಎಂದು ಹೇಳಲಿ. ಕಾರು ತಯಾರಿಕರ ಹಿತಾಸಕ್ತಿಗೆ ಸಿಕ್ಕಿದ ಈ ಸರ್ಕಾರಕ್ಕೆ ಕಾರನ್ನು ಹೊರದೇಶದಿಂದ ತರಿಸಿಕೊಳ್ಳುವಂಥ ಮನಸ್ಸೂ ಇಲ್ಲ, ತರಿಸಿಕೊಳ್ಳುವಂಥ ಇಚ್ಛಾಶಕ್ತಿಯೂ ಇಲ್ಲ. ಆದರೆ, ರೈತ ಬೆಳೆದಂಥ ವಸ್ತುಗಳ ಬೆಲೆ ಜಾಸ್ತಿಯಾಯಿತು ಎನ್ನುವ ಕಾರಣ ಕೊಟ್ಟು, ಹೊರದೇಶದಿಂದ ತರಿಸುವಂಥ ನೀತಿ, ಯಾರೂ ಒಪ್ಪುವಂಥಾದ್ದಲ್ಲ. ಅಷ್ಟೆ ಅಲ್ಲ, ಈ ಸದನದ ನನ್ನಮಿತ್ರರಿಗೆ ಮತ್ತು ತಮಗೆ ಗೊತ್ತಿದೆಯೋ ಇಲ್ಲವೋ. ನಾವು ಇಲ್ಲಿ ಸಮಾಜವಾದದ ತತ್ವವನ್ನು ಹೇಳುತ್ತೇವೆ, ಭಾಷಣ ಮಾಡುತ್ತೇವೆ. ಆ ಸಮಾಜವಾದದ ತತ್ವ ಇಲ್ಲಿ ಬಹಳ ಸೈಲೆಂಟಾಗಿ, transplant ಆಗುತ್ತಿದೆ. ಹೇಗೆ ಎಂದರೆ, ರೇಷ್ಮೆ ಬೆಳೆಯುವವರು, ದಾರ ತೆಗೆಯುವವರು, ನೇಯ್ಗೆ ಮಾಡುವವರು ಅತ್ಯಂತ ಕಡುಬಡವರು. ಆದರೆ ಕೊಂಡುಕೊಳ್ಳುವವರು ಅತ್ಯಂತ ಐಶ್ವರ್ಯವಂತರು. ಐಶ್ವರ್ಯವಂತನ ರೇಷ್ಮೆ ಬಟ್ಟೆಯ ವ್ಯಾಮೋಹ, ಬಡವನ ಬದುಕಿಗೆ ಆಧಾರ. ಇಂತಹ ಬಡವನ ವಸ್ತುವಿಗೆ ಒಂದು ರೂಪಾಯಿ ಅಥವಾ ಎರಡು ರೂಪಾಯಿ ಜಾಸ್ತಿಯಾದರೂ ಕೂಡ ಬಡವನಿಗೆ ಅನುಕೂಲವಾಗುತ್ತದೆ. ಈ ನನ್ನ ವಾದವನ್ನು ನಾನೇ ನಾನಾಗಿ ಸಮರ್ಥಿಸಿಕೊಳ್ಳುವುದಕ್ಕೆ ಇಷ್ಟವಿಲ್ಲ. ಕೇಂದ್ರ ಸರ್ಕಾರ, according to the report of the consumer purchase of Textiles, 1980, Market Research Wing, Textile Committee and the Indian Institute of Management, Bangalore in its study of Market for Silk Fabrics 1985, silk pruchases are predominantely concentrated in the upper income group. Income group-wise break up of silk sarees is-- ೯೧.೧೭ ಇಷ್ಟು, ರೇಷ್ಮೆ ವಸ್ತುಗಳನ್ನು ಕೊಂಡುಕೊಳ್ಳುವಂಥ ಜನಗಳ ಆದಾಯ ೧೦ ಸಾವಿರ ರೂಪಾಯಿಗಳಿಂದ ಮೇಲ್ಪಟ್ಟು. ೧,೫೦೦ ರೂಪಾಯಿಗಳಿಂದ ಕೆಳಗಿನವರು ಕೊಂಡುಕೊಳ್ಳುವಂಥಾದ್ದು ೦.೦೫. ಆದ್ದರಿಂದ, ರೇಷ್ಮೆ ವಸ್ತುವಿನ ಬೆಲೆ ಹೆಚ್ಚಾದರೂ ಕೂಡ, ಅದರಿಂದ ರಾಷ್ಟ್ರದ ಯಾವ ಬಡವನಿಗೂ ತೊಂದರೆಯಾಗುವುದಿಲ್ಲ, ಬಡವನಿಗೆ ಅನುಕೂಲವಾಗುತ್ತದೆ. ರೇಷ್ಮೆ ಬೆಲೆ ಜಾಸ್ತಿಯಾಯಿತು ಎಂದು ಯಾರಾದರೂ ತಿಳಿದಿದ್ದರೆ, ಅದು ಸರಿಯಾದುದಲ್ಲ. ಬಡವನ ಬದುಕಿಗೆ ಆಧಾರವಾಗುವಂಥ ಇದರ ಬೆಲೆ ಹೆಚ್ಚಾದರೆ, ಅವನಿಗೆ ಎರಡು ತುತ್ತಿನ ಅನ್ನ ತಿನ್ನುವಂಥ ಶಕ್ತಿ ಬರುತ್ತದೆ, ಅನ್ನಕ್ಕೆ ಅನುಕೂಲವಾಗುತ್ತದೆ. ಇದು ಎರಡನೆಯದು. ಮೂರನೆಯದು, ಈ ರೇಷ್ಮೆ ಸಿಕ್ಕಲೇ ಇಲ್ಲವೆಂದು ಇಟ್ಟುಕೊಳ್ಳಿ. ನಮ್ಮಲ್ಲಿರತಕ್ಕ ಸ್ಟಾಕ್ ಎಲ್ಲವೂ ಮುಗಿದುಹೋಯಿತು. ರೇಷ್ಮೆ ಈ ದೇಶದಲ್ಲಿ ಇರುವುದೇ ಇಲ್ಲ. Nobody will die. It is not edible oil. It is not a foodgrain. It is not right to say that the people will die with out these materials. It

is not an essential commodityy. Then why should you import under the pretext that the price of the silk has gone up. ಈ ಎಲ್ಲಾ ಕಾರಣಗಳ ದೃಷ್ಟಿಯಿಂದ ಈ ರೇಷ್ಮೆಯನ್ನು ಆಮದು ಮಾಡಿಕೊಳ್ಳುವಂಥ ಅನಿಷ್ಟ ನೀತಿ ಏನಿದೆ, ಇದು ಈ ರಾಷ್ಟ್ರದ ರೇಷ್ಮೆ ಉದ್ಯಮವನ್ನು ಸಂಪೂರ್ಣವಾಗಿ ನಾಶಮಾಡುತ್ತದೆ. ಇವರು ಎಲ್ಲಿಂದ ಇಂಪೋರ್ಟ್ ಮಾಡಿಕೊಳ್ಳುತ್ತಿದ್ದರು, ತಮಗೆ ಇದರ ಬಗ್ಗೆ ಮಾಹಿತಿ ಇದೆಯೋ ಇಲ್ಲವೋ ಗೊತ್ತಿಲ್ಲ. ಚೈನಾದಿಂದ ನಮ್ಮ ದೇಶಕ್ಕೆ ಹೆಚ್ಚಿನ ರೇಷ್ಮೆ ಬರುತ್ತದೆ. ರೇಷ್ಮೆ ಉದ್ಯಮದ ನಾಶಕ್ಕೆ ಆಮದು ಒಂದೇ ಕಾರಣ ಅಲ್ಲ. ಇದರ ಜೊತೆಗೆ ಸ್ಮಗ್ಲಿಂಗ್ ಕೂಡ ಕಾರಣ.

೨.೦೦ ಪಿ.ಎಂ.

ಕದ್ದು ತರುವುದು ಸಾಕಷ್ಟು ನಡೆಯುತ್ತಿದೆ. ಇನ್ನು ಒಂದು ತಮಾಷೆಯಾದ ವಿಷಯ ಏನೆಂದರೆ ಚೈನಾದೇಶದಿಂದ ಭಾರತ ದೇಶಕ್ಕೆ ಬರತಕ್ಕಂಥ ರೇಷ್ಮೆಯನ್ನು ಕಡಿಮೆ ಧಾರಣೆಯಲ್ಲಿ ಮಾರಾಟ ಮಾಡುವುದಕ್ಕೆ ಚೈನಾ ದೇಶದವರು ಸಿದ್ಧವಾಗಿದ್ದಾರೆ. ಕೋಲಾರದವರು ಸ್ವಲ್ಪ ಕೇಳಬೇಕು. ಚೈನಾದೇಶದಲ್ಲಿ ತಮ್ಮ ಮಾರುಕಟ್ಟೆ ಏನು ಇದೆ ಅದಕ್ಕಿಂತ ಕಡಿಮೆ ಬೆಲೆಗೆ ಈ ದೇಶದಲ್ಲಿ ಸಿಲ್ಕ್ ಮಾರಾಟ ಮಾಡುವುದಕ್ಕೆ ಸಿದ್ಧರಾಗಿದ್ದಾರೆ.. ಅಷ್ಟೇ ಅಲ್ಲ, ಅಂತರರಾಷ್ಟ್ರೀಯ ಮಾರುಕಟ್ಟೆಯಾದ ಯೂರೋಪಿಯನ್ ಮಾರುಕಟ್ಟೆಗಿಂತ ಕಡಿಮೆ ದರದಲ್ಲಿ ಮಾರಾಟ ಮಾಡುವುದಕ್ಕೆ ಸಿದ್ಧರಾಗಿದ್ದಾರೆ. ಏಕೆ? ಈ ದೇಶದ ಜನತೆ ಬಹಳ ಸಂಭ್ರಮವಾಗಿ ರೇಷ್ಮೆಬಟ್ಟೆಯನ್ನು ಕಡಿಮೆ ದರದಲ್ಲಿ ತೆಗೆದುಕೊಂಡು ಧರಿಸಲಿ ಅನ್ನುವ ಉದ್ದೇಶದಿಂದ ಅಲ್ಲ. ಅವರ ಉದ್ದೇಶ with ulterior motive to destroy the Indian Sericulture Industry who are competitors in the international market --- Has this Government not understood this? ವಿಶ್ವದ ಮಾರುಕಟ್ಟೆಯಲ್ಲಿ ಇವತ್ತಿನ ಪರಿಸ್ಥಿತಿಯಲ್ಲಿ ಯಾರಾದರೂ ಸ್ಪರ್ಧೆ ಮಾಡುವುದಕ್ಕೆ ಶಕ್ತಿ ಇದ್ದರೆ, ಆ ಶಕ್ತಿ ಇರುವುದು ಭಾರತ ದೇಶ ಒಂದಕ್ಕೆ ಮಾತ್ರ. ಆ ಶಕ್ತಿಯನ್ನು ಕುಂದಿಸಬೇಕು. ಆ ಶಕ್ತಿಯನ್ನು ನಾಶ ಮಾಡಬೇಕು. ಭಾರತ ದೇಶದ ರೇಷ್ಮೆ ಉತ್ಪನ್ನ ಮಾಡಲಿಕ್ಕೆ ಇರುವಂತಹ ಶಕ್ತಿಯನ್ನು ಸಂಪೂರ್ಣವಾಗಿ ಕೊಲ್ಲಬೇಕು ಎನ್ನುವ ದುರುದ್ದೇಶದಿಂದ ಚೈನಾದೇಶ ಅವರ ಮಾರುಕಟ್ಟೆಗಿಂತ ಕಡಿಮೆ ಬೆಲೆಗೆ ನಮಗೆ ಮಾರಾಟ ಮಾಡುವುದಕ್ಕೆ ಸಿದ್ಧರಿದ್ದಾರೆ. it is not to help people of this country but to kill this country they are selling silk for a price less than their own market and price less than international market.. ಇದನ್ನು ಅರ್ಥ ಮಾಡಿಕೊಂಡು ಈ ದೇಶ ರೇಷ್ಮೆ ಆಮದನ್ನು ಸಂಪೂರ್ಣವಾಗಿ ನಿಲ್ಲಿಸಬೇಕು. ಇದರ ಜೊತೆಗೆ ಮಾನ್ಯ ಅಧ್ಯಕ್ಷರೇ ರೇಷ್ಮೆ ಆಮದು ಅಷ್ಟೇ ಅಲ್ಲ, ಭಾರತಕ್ಕೆ ರೇಷ್ಮೆ ಕಳ್ಳಸಾಗಾಣಿಕೆಯಲ್ಲಿ ಕೂಡ ಸಾಕಷ್ಟು ಬರುತ್ತದೆ. ತಮಗೆ ಗೊತ್ತಿರುವ ಹಾಗೆ ಚೈನಾದೇಶಕ್ಕೆ ಹೊಂದಿಕೊಂಡಿರುವಂತೆ ಹಾಂಕಾಂಗ್ ಎಂದು ಏನಿದೆ ಆ ಹಾಂಕಾಂಗ್‌ನಿಂದ ಸಾಕಷ್ಟು ರೇಷ್ಮೆ ಈ ದೇಶಕ್ಕೆ ಬರುತ್ತದೆ. ಸೆರಿಕ್ರಾಫ್ ನವೆಂಬರ್, ಅದರೊಳಗೆ ಈ ವಿಷಯದಲ್ಲಿ ಸ್ಪಷ್ಟವಾದ ಒಂದು ಬರವಣಿಗೆ ಇದೆ. ಆ ಬರವಣಿಗೆ ಸಾರಾಂಶ ಏನಿದೆ ಅಂದರೆ China is dumping silk to Hongkong. Through Hongkong China silk is available throughout the country... ಈ ಎಲ್ಲಾ ದೃಷ್ಟಿಯಿಂದ ಆಮದು ನೀತಿಯನ್ನು ನಿಲ್ಲಿಸುವ ಒಂದು ದೃಢನಿರ್ಧಾರವನ್ನು ಕೇಂದ್ರದವರು ಮಾಡಬೇಕು. ಮತ್ತೆ ಅದರ ಜೊತೆಗೆ ಚೈನಾದಿಂದ ಕದ್ದು ಬರತಕ್ಕಂಥ ರೇಷ್ಮೆಯನ್ನು ನಿಲ್ಲಿಸುವುದಕ್ಕೆ ಕೇಂದ್ರ ಸರ್ಕಾರ ಒಂದು ಕಟ್ಟುನಿಟ್ಟಿನ ಕ್ರಮವನ್ನು ಅನುಸರಿಸಬೇಕು. ಇಷ್ಟು ಮಾಡಿದರೆ ಬಹುಶಃ ನಮ್ಮ ರಾಷ್ಟ್ರದ ರೇಷ್ಮೆ ಉದ್ದಿಮೆಯಲ್ಲಿ ತೊಡಗಿರತಕ್ಕಂಥ ಬಡವರಿಗೆ ಅನುಕೂಲ ಮಾಡಿ ಕೊಟ್ಟಂಥ ಪುಣ್ಯ ಕೇಂದ್ರ ಸರ್ಕಾರಕ್ಕೆ ಬರುತ್ತದೆ. ಮಾನ್ಯ ಸಭಾಪತಿಯವರೇ, ರೇಷ್ಮೆ ಆಮದನ್ನು ಮೊಟ್ಟಮೊದಲನೆಯಾದಾಗಿ ನಾವು ವಿರೋಧಿಸುತ್ತಿಲ್ಲ.

ಈಗಾಗಲೇ ಕರ್ನಾಟಕ ರಾಜ್ಯದ ಎಲ್ಲಾ ಸರ್ಕಾರಗಳು ಇದನ್ನು ವಿರೋಧಿಸಿವೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಮಾಡಿದಂಥ ಹೇಳಿಕೆ. ಈ ಬಗ್ಗೆ ನಾನು ಕಾಗದ ಬರೆದಿದ್ದೇನೆ, ಈ ಆಮದು ನೀತಿಯಿಂದ ಕರ್ನಾಟಕ ರಾಜ್ಯದ ರೇಷ್ಮೆ ಬೆಳೆಗಾರರಿಗೆ ತೊಂದರೆಯುಂಟಾಗಿದೆ. ಈ ಸದನದಲ್ಲಿ ಹಾಲಿ ಮುಖ್ಯಮಂತ್ರಿಗಳು ಮಾಡಿದಂಥ ಒಂದು ಹೇಳಿಕೆ ೧೯೮೫-೮೬ರಲ್ಲಿ. ಇದರಲ್ಲಿ ಡೇಟ್ ಇಲ್ಲ. ಹೇಳಿಕೆ ಮಾತ್ರ ಇದೆ. ಇದು ನಿಜವಾಗಿದ್ದಲ್ಲಿ ಆ ಕಡೆ ಇರುವಂತಹ ಎಲ್ಲಾ ಸದಸ್ಯರು ದಯಮಾಡಿ ಸಹಾಯ ಮಾಡಬೇಕು. 'We will pass aunanimous resolution to request the Central Government to ban import of raw silk totally' ಈ ರಾಜ್ಯದ ಮುಖ್ಯಮಂತ್ರಿಗಳು ಇದನ್ನು ಹೇಳಿದ್ದಾರೆ. ಜೊತೆಗೆ ಈ ವಿಷಯದಲ್ಲಿ ನಾನು ಸರ್ಕಾರದ ಕಣ್ಣು ತೆರೆಸುವುದಕ್ಕೆ ಒಂದು ಪ್ರಮುಖ ದಿನ ಪತ್ರಿಕೆಯಲ್ಲಿ ಬರೆದಿರತಕ್ಕ ವೆಡಿಟೋರಿಯಲ್ ಕಾಲಂ ಏನಿದೆ ಅದನ್ನು ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

"The State Government has once again taken up the cause of a section of the economy that has been adversely affected by the Centre's economic policy. Earlier, the Karnataka Government was among the first to point out that the textile policy would hit the coton growers. And now the State's Sericulture Department has taken asking for a ban on the import of the raw silk questioned the Central Policy towards the State. The centre has shown a tendency to concentrate on the export of the silk goods while paying much less attention to the domestic sericulture industry. The export of silk goods showed a sharp spurt during the second half of the Sixth plan and in 1984-85 was 29% greater than the target of Rs. 100 crores. As a result, though the country's raw silk production reached a record level of 6,754 tonnes at the end of the Sixth plan, the price of this commodity has risen. The Union Government has kept the rise in raw silk price in check by resorting to imports. In this strategy, it has been helped by the fact that China has been willing to sell the raw silk to India at 27 per tonne compared to the prevailing world market price of ... 65 per tonne.

In the short run the Union Government 's policy will, no doubt, ensure that the price paid for raw silk by the manufacturers and exporters of silk goods does not rise sharply. But this strategy could have disastrous long-term consequences for the country's sericulture industry"......

ಇನ್ನು ಉಳಿದಿದ್ದೆಲ್ಲಾವನ್ನೂ ಓದಲಿಕ್ಕೆ ಇಷ್ಟವಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ಈ ನೀತಿಯಿಂದಾಗಿ ಈ ರಾಷ್ಟ್ರದ ಅತಿ ದೊಡ್ಡ ಒಂದು ಉದ್ಯಮ ನಾಶವಾಗುತ್ತಿದೆ. ಆದರಿಂದ ಆಮದನ್ನು ಸಂಪೂರ್ಣವಾಗಿ ಬ್ಯಾನ್ ಮಾಡಬೇಕೆಂದು ನಾನು ಕೋರಿಕೊಳ್ಳುತ್ತೇನೆ. ಜೊತೆಗೆ ಅನೇಕ ವರ್ಷಗಳಿಂದ ನಾವು ಕೇಂದ್ರ ಸರ್ಕಾರದ ಮೇಲೆ ಎಲ್ಲಾ ಪಕ್ಷದವರು ಒತ್ತಡ ತಂದರೂ ಕೂಡ ಅದರಲ್ಲಿ ನಾವು ಸಂಪೂರ್ಣವಾಗಿ ಸಫಲವಾಗಿಲ್ಲ. ಅದಕ್ಕೆ ನಾನು ಮುಖ್ಯ ಮಂತ್ರಿಗಳಿಗೆ ತಮ್ಮ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುವುದಕ್ಕೆ

ಇಷ್ಟಪಡುತ್ತೇನೆ, ಅವರು ಈ ವಿಷಯದಲ್ಲಿ ಕೇಂದ್ರಸರ್ಕಾರದ ಮೇಲೆ ಒತ್ತಡ ತರಬೇಕಾಗುತ್ತದೆ. ತರದೇ ಇದ್ದರೆ ೫೫ ರೂಪಾಯಿಗಳಿಗೆ ಗೂಡನ್ನು ಮಾರುವಂಥ ಪರಿಸ್ಥಿತಿ ಈ ರಾಜ್ಯದಲ್ಲಿ ಇನ್ನು ಸ್ವಲ್ಪ ದಿವಸ ಮುಂದುವರಿದರೆ ರೈತ ಕಡ್ಡಿ ಕಿತ್ತುಹಾಕುತ್ತಾನೆ. ಅವನಿಗೆ ವಿಧಿ ಇಲ್ಲ. ಬೆಳೆಯನ್ನು ಬೆಳೆಯಲಿಕ್ಕೆ ಕಣ್ಣೀರು ಸುರಿಸಿ ನೀರನ್ನು ಒದಗಿಸುತ್ತಾನೆ. ಇದರ ಜೊತೆಗೆ ಗೊಬ್ಬರದ ಬೆಲೆ ಕೂಡ ಜಾಸ್ತಿಯಾಗಿದೆ. ಆದ್ದರಿಂದ ನೀವು ಏನಾದರೂ ಇದರ ಬಗ್ಗೆ ಮಾಡದೇ ಇದ್ದರೆ ಇದನ್ನು ರೈತ ಕಿತ್ತು ಹಾಕಿ ಟೊಮ್ಯಾಟೋ, ಆಲೂಗೆಡ್ಡೆ, ಕಬ್ಬು ಹಾಕುತ್ತಾನೆ., ಇಲ್ಲದಿದ್ದರೆ ಕೋಸು ಬೆಳೆಯುತ್ತಾರೆ. ಈ ಪರಿಸ್ಥಿತಿ ಏನಾದರೂ ಉಂಟಾದರೆ, ಮತ್ತು ಬೆಲೆ ಕಡಿಮೆ ಆದರೆ ರೈತ ರೇಷ್ಮೆ ಕಡ್ಡಿಯನ್ನು ಕಿತ್ತು ಹಾಕಿದರೆ, ಈ ರಾಷ್ಟ್ರಕ್ಕೆ ಹೆಚ್ಚಿನ ದೇಣಿ ಕೊಡತಕ್ಕ ಕರ್ನಾಟಕದಲ್ಲಿ ರೇಷ್ಮೆ ಉತ್ಪತ್ತಿ ಕಡಿಮೆಯಾಗುತ್ತದೆ. ಬೆಳೆ ಕಡಿಮೆ ಆಗುವಂಥ ಅಪಕೀರ್ತಿಗೆ ದಯಮಾಡಿ ನಮ್ಮ ಜಿಲ್ಲೆಯ ಹೊಸ ಮಂತ್ರಿಗಳ ಮೇಲೆ ತರಬೇಡಿ. ಪಾಪ, ಅವರು ಹೊಸದಾಗಿ ಮಂತ್ರಿಗಳಾಗಿದ್ದಾರೆ. ನಾನು ಅವರ ಮೇಲೆ ವಿಶ್ವಾಸ ಇಟ್ಟುಕೊಂಡಿದ್ದೇನೆ. ಇದರಲ್ಲಿ ಏನಾದರೂ ಸರ್ಕಸ್ ಮಾಡಿದರೆ, ದೊಂಬರಾಟ ಮಾಡಿದರೆ, If you don't provide better layings and remunerative prices you connot raise the production. This is the basis - ಬಂದಂಥ ಬೆಳೆಗೆ ಉತ್ತಮವಾದ ಬೆಲೆ ಕೊಡದಿದ್ದರೆ ನೀವು ಎಷ್ಟೇ ಕಷ್ಟಪಟ್ಟರೂ ಇದರ ಉತ್ಪತ್ತಿಯನ್ನು ಜಾಸ್ತಿ ಮಾಡಲಿಕ್ಕೆ ಸಾಧ್ಯವಿಲ್ಲ. ಇವೆರಡನ್ನು ಜಾಸ್ತಿ ಮಾಡಬೇಕೆಂದರೆ at the cost of your position you should resist this unwise policy of the Central Government.. ಇದನ್ನು ಮಾಡುತ್ತಿರೆಂದು ಭಾವಿಸಿಕೊಂಡು ಒಂದು ಮಾತನ್ನು ಕೊನೆಯದಾಗಿ ಹೇಳಿ ನನ್ನ ಮಾತು ಮುಗಿಸುತ್ತೇನೆ. ಅಧ್ಯಕ್ಷರೆ, ಕೇಂದ್ರ ಸರ್ಕಾರವೂ ತಪ್ಪು ಮಾಹಿತಿ ಕೊಡುತ್ತಿದೆ. ಏನು ತಪ್ಪು ಮಾಹಿತಿ ಕೊಡುತ್ತಿದೆ ಎಂದರೆ, ಎಷ್ಟು ಸಿಲ್ಕ್‌ನ್ನು ಹೊರದೇಶದಿಂದ ತರಿಸುತ್ತಿದ್ದೇವೆ ಎಂಬ ಮಾಹಿತಿ ಕೊಡುತ್ತಿದ್ದಾರೆ, ಅವರು ಕೊಡುತ್ತಿರುವಂಥ ಮಾಹಿತಿಯನ್ನು ನಾನು ನಂಬಲಿಕ್ಕೆ ಸಿದ್ದನಿಲ್ಲ. ೨೦೫೮ ಟನ್ ಅನ್ನು ಇಂಪೋರ್ಟ್ ಮಾಡಿಕೊಳ್ಳುತ್ತಿದ್ದೇನೆಂದು ಅವರು ಹೇಳುತ್ತಾರೆ. This is not correct because if you deply a policy officer through your Enforcement cell, you will find atleast 2000 tons of China Silk which is being used in the Bangalore market itself. I do not know what your Enforcement wing is doing? Try to find out whether it is true or not. ಇದು ನಿಜ ಇದ್ದರೆ, ೨೦೦೦ ಟನ್ ಬೆಂಗಳೂರಿನಲ್ಲಿಯೇ ಉಪಯೋಗವಾಗುತ್ತಿದ್ದರೆ, ಇಡೀ ಭಾರತ ದೇಶಕ್ಕೇ ೨೦೫೮ ಟನ್‌ನ್ನು ಮಾತ್ರ ಆಮದು ಮಾಡಿಕೊಳ್ಳುತ್ತೇವೆ ಎನ್ನುವ ಮಾತು ಹಸೀ ಸುಳ್ಳು, ಇದು ನಿಜವಾದದ್ದು ಅಲ್ಲ. ಆದ್ದರಿಂದ ಲಕ್ಷಾಂತರ ಕುಟುಂಬಗಳ ಹೊಟ್ಟೆಪಾಡಿನ ಉದ್ಯಮವಾಗಿರುವಂಥ ಈ ಉದ್ಯಮವನ್ನು ಬದುಕಿಸಲಿಕ್ಕಾಗಿ ಯಾವುದೇ ದೃಷ್ಟಿಯಿಂದ ನೋಡಿದರೂ ಕೂಡ ಆಮದನ್ನು ಮಾಡುವುದು ಸರಿಯಲ್ಲ ಎನ್ನುವುದು ಕೇಂದ್ರ ಸರ್ಕಾರದ ಗಮನಕ್ಕೂ ಬಂದಿದೆ. ರೇಷ್ಮೆ ಆಮದು ಮಾಡಿಕೊಂಡ ನಂತರವು ರೇಷ್ಮೆ ಬೆಲೆ ಕಡಿಮೆಯಾಗಿಲ್ಲ. It is not that Central Government is not aware of the fact that it will destroy the local industries import is not a correct policy. Then, why they are importing? ದುರಂತ ಇಷ್ಟೇ ಆಗಿರುವುದು. ಈ ರಾಷ್ಟ್ರದಲ್ಲಿ ರೇಷ್ಮೆ ಉತ್ಪಾದನೆ ಮಾಡುವವರು ಈ ಕೊನೆಯಲ್ಲಿ ಕುಳಿತಿದ್ದೇವೆ. ನಾವು ಎರಡು ಸಾವಿರ ಮೈಲಿಗಳಿಂದ ಕಿರುಚಿದರೂ ಕೂಡ ಅವರಿಗೆ ಕೇಳುವುದಿಲ್ಲ. ಇವರ ನಾಡಿಗಳನ್ನು ಹಿಡಿದು ಜಗ್ಗುವಂಥವರು ಈ ರಾಷ್ಟ್ರದಲ್ಲಿ ಕೇವಲ ೧೨ಜನರು ಮಾತ್ರ ಇದ್ದಾರೆ. ಅವರುಗಳು ಬಾಂಬೆ, ಕಲ್ಕತ್ತ, ಡೆಲ್ಲಿ, ಮತ್ತು ವಾರಣಾಸಿಯಲ್ಲಿ ಇದ್ದಾರೆ. ಈ ಹನ್ನೆರಡು ಜನರ ಹಿತಾಸಕ್ತಿಗಾಗಿ ಕೇಂದ್ರ ಸರಕಾರದವರು ಹೊರದೇಶಗಳಿಂದ ರೇಷ್ಮೆಯನ್ನು ಆಮದು ಮಾಡಿಕೊಳ್ಳುವಂಥ ಅನಿಷ್ಟ

ಪದ್ಧತಿಯನ್ನು ಮುಂದುವರಿಸಿಕೊಂಡು ಬಂದಿದಕ್ಕೆ, ಈ ಮಾತನ್ನು ಹೇಳುವಾಗ ನಾನು ಒಬ್ಬ ವ್ಯಕ್ತಿಯನ್ನಾಗಲೀ, ಒಂದು ಪಕ್ಷದ ಸರಕಾರವನ್ನಾಗಲೀ ಕುರಿತು ಮಾತನಾಡುತ್ತಾ ಇಲ್ಲ. ಈ ಒಂದು ಅನಿಷ್ಟ ಪದ್ಧತಿಯು ಎಲ್ಲಾ ಕಾಲದಿಂದಲೂ ಬಂದಿದೆ. ಈ ರಾಷ್ಟ್ರದಲ್ಲಿರುವ ರೇಷ್ಮೆ ವರ್ತಕರ ಹಿತವನ್ನು ಕಾಪಾಡುವ ಒಂದೇ ಒಂದು ಉದ್ದೇಶದಿಂದ, ಆಮದು ಮಾಡಿಕೊಳ್ಳಲು ಯಾವುದೇ ಕಾರಣ ಇಲ್ಲದಿದ್ದರೂ ಕೂಡ, ಆಮದು ಮಾಡಿಕೊಳ್ಳುತ್ತಾ ಇದ್ದಾರೆ. ಈ ರಾಜ್ಯ ಮತ್ತು ಕೇಂದ್ರ ಸರಕಾರದ ಉದ್ದೇಶವು ಕೇವಲ ಈ ಹನ್ನೆರಡು ಜನರ ಹಿತರಕ್ಷಣೆ ಮಾಡುವುದೇ, ನಿಮ್ಮ ಆದ್ಯತೆ ಆದರೆ, ನನ್ನ ಈ ವಾದಕ್ಕೆ ಹುರುಳಿಲ್ಲ. ಆ ಹನ್ನೆರಡು ಜನರ ಬದುಕನ್ನು ಮರೆತು ಅವರ ಹಿತಾಸಕ್ತಿಯನ್ನು ಭೂಮಿಗೆ ತುಳಿದು, ೧೦ಲಕ್ಷ ಕುಟುಂಬಗಳ ಹಿತಾಸಕ್ತಿಯನ್ನು ಕಾಪಾಡುವಂಥ ಇಚ್ಛಾಶಕ್ತಿ ಇದ್ದರೆ, ನನ್ನ ಸ್ನೇಹಿತರು ಕೇಂದ್ರ ಸರಕಾರಕ್ಕೆ ಬುದ್ಧಿ ಹೇಳುವಂಥ ಒಂದು ತೀರ್ಮಾನವನ್ನು ಈ ಸದನದಲ್ಲಿ ತೆಗೆದುಕೊಳ್ಳ ಬೇಕಾಗುತ್ತದೆ. ಸರ್ಕಾರದ ಖರ್ಚಿನಲ್ಲಿ ನಮ್ಮನ್ನು ಕರೆದುಕೊಂಡು ಹೋದರೆ ನೀವು ಹೇಳದೆ ಇದ್ದರೆ ನಾವಾದರೂ ಅವರಿಗೆ ಹೇಳುತ್ತೇವೆ ಆದ್ದರಿಂದ ಒಂದು ನಿಯೋಗವನ್ನು ಸರಕಾರದವರು ಕೇಂದ್ರಕ್ಕೆ ಕಳುಹಿಸಿ ಅವರು ಮಾಡುತ್ತಾ ಇರುವಂಥ ತಪ್ಪನ್ನು ಅವರಿಗೆ ಅರಿವು ಮಾಡಿಕೊಡುವಂಥ ಕೆಲಸವನ್ನು ಮಾಡಬೇಕೆಂದು ಹೇಳಿ, ಮಾತನಾಡಲು ಅವಕಾಶ ಕೊಟ್ಟ ತಮ್ಮನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಈಗ ಸದನವನ್ನು ೩-೦೦ ಗಂಟೆ ತನಕ ಮುಂದೂಡುತ್ತೇನೆ.

(ಸದನವು ೨-೧೫ಕ್ಕೆ ಮುಕ್ತಾಯ ಗೊಂಡು ಮತ್ತೆ ೩-೦೦ ಗಂಟೆಗೆ ಸೇರಲು ನಿರ್ಧರಿಸಿತು)
(ಸದನವು ೩.೨೫ ಘಂಟೆಗೆ ಪ್ರಾರಂಭವಾಯಿತು)

(ಶ್ರೀ ವಿ.ಎಸ್. ಕೌಜಲಗಿಯವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

* ಶ್ರೀ ಸಿ. ಬೈರೇಗೌಡ (ವೇಮಗಲ್):- ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ನಾನು ಮತ್ತು ನನ್ನ ಕೆಲವು ಸ್ನೇಹಿತರು ಈ ರೇಷ್ಮೆ ಗೂಡಿನ ಬೆಲೆ ಪಾತಾಳವನ್ನು ತಲುಪಿರುವುದರ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ತಮ್ಮ ಒಪ್ಪಿಗೆಗಾಗಿ ತಂದಿದ್ದೇವೆ. ತಾವ ಅು ಒಪ್ಪುತ್ತೀರೆಂಬ ಭಾವನೆಯಿಂದ ಒಂದೆರಡು ಮಾತುಗಳನ್ನು ಇದರ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ರೇಷ್ಮೆ ಬೆಳೆಯಲ್ಲಿ ಪ್ರಪಂಚದಲ್ಲಿ ಮೊದಲು ಒಂದನೇ ಸ್ಥಾನದಲ್ಲಿ ಜಪಾನ್ ದೇಶ ಇತ್ತು. ಜಪಾನ್ ದೇಶ ಕೈಗಾರಿಕಾಕರಣವಾದ ಮೇಲೆ ಇಂದು ೩ನೇ ಸ್ಥಾನಕ್ಕೋ ೫ ನೇ ಸ್ಥಾನಕ್ಕೋ ಹೋಗಿದೆ. ಇವತ್ತು ಒಂದನೇ ಸ್ಥಾನದಲ್ಲಿ ಚೈನಾ ದೇಶ ಇದೆ. ಎರಡನೆಯದು ನಮ್ಮ ಭಾರತ ದೇಶ. ಭಾರತ ದೇಶದಲ್ಲಿ ಉತ್ಪತ್ತಿಯಾಗತಕ್ಕಂಥ ರೇಷ್ಮೆ ಶೇಕಡಾ ೬೦ ರಿಂದ ೭೦ ರಷ್ಟು ಭಾಗ ಮಲಬರಿ ಅಂದರೆ ರೇಷ್ಮೆ ಕಡ್ಡಿಯಿಂದ ಉತ್ಪಾದನೆ ಮಾಡತಕ್ಕಂಥ ರೇಷ್ಮೆ. ಅದರಲ್ಲಿ ಶೇಕಡಾ ೭೦ ರಿಂದ ೮೦ ರಷ್ಟು ನಮ್ಮ ರಾಜ್ಯದಲ್ಲಿ ಉತ್ಪತ್ತಿಯಾಗುತ್ತದೆ. ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗತಕ್ಕಂಥ ರೇಷ್ಮೆಯಲ್ಲಿ ಶೇಕಡಾ ೫೦ ಕ್ಕೂ ಹೆಚ್ಚು ಭಾಗ ನಮ್ಮ ಕೋಲಾರ ಜಿಲ್ಲೆಯಿಂದ ಉತ್ಪತ್ತಿಯಾಗುತ್ತಿದೆ. ಈ ಕೋಲಾರ ಜಿಲ್ಲೆಯಲ್ಲಿ ಏನಾದರೂ ನಾಲ್ಕು ಕಾಸು ನೋಡುತ್ತೇವೆ, ನಾವು ಒಂದು ಅಷ್ಟು ಮನುಷ್ಯರ ರೀತಿಯಲ್ಲಿ ತಿರುಗಾಡುತ್ತಿದ್ದೇವೆಂದರೆ ಅದಕ್ಕೆ ಮುಖ್ಯ ಕಾರಣ ರೇಷ್ಮೆ, ೨ನೇಯದು ತರಕಾರಿ ಮತ್ತು ಹಾಲು ಉತ್ಪಾದನೆ. ನಾನು ಇವತ್ತಿನ ದಿವಸ ಹಾಲು ಮತ್ತು ತರಕಾರಿ ಬಗ್ಗೆ ಹೇಳುವುದಿಲ್ಲ. ರೇಷ್ಮೆ ಬಗ್ಗೆ ಮಾತ್ರ ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ರೇಷ್ಮೆಗೆ ಒಂದು ದೊಡ್ಡ ಇತಿಹಾಸ ಇದೆ. ಸುಮಾರು ಮುನ್ನೂರು ವರ್ಷದ ಹಿಂದಿನಿಂದ ನಮ್ಮ ಜಿಲ್ಲೆಯಲ್ಲಿ ರೇಷ್ಮೆ ಉತ್ಪಾದನೆಯಾಗುತ್ತಿದೆ. ಟೀಪೂಸುಲ್ತಾನ್ ರೇಷ್ಮೆ ತರುವುದಕ್ಕೆ ಮೊದಲಿಂದಲೂ ನಮ್ಮ ಜಿಲ್ಲೆಯಲ್ಲಿ ರೇಷ್ಮೆ ಉತ್ಪಾದನೆಯಾಗುತ್ತಿತ್ತು. ಅದರಲ್ಲೂ ನನ್ನ ಕ್ಷೇತ್ರದಲ್ಲಿ ಐದು ನೂರು ವರ್ಷಗಳ ಹಿಂದಿಲಿಂದಲೂ ರೇಷ್ಮೆ ಉತ್ಪಾದನೆ ಆಗುತ್ತಿತ್ತು. ನಾನು ರೇಷ್ಮೆ ಬೆಳೆಯತಕ್ಕಂಥ ಮನೆಯಲ್ಲಿ ಹುಟ್ಟಿರುವವನು, ರೇಷ್ಮೆ ಜೊತೆಯಲ್ಲೆ

ಬೆಳೆದಿರತಕ್ಕಂಥವನು, ಇಲ್ಲಿ ನಿಂತುಕೊಂಡು ನಾನು ಮಾತನಾಡುವುದಕ್ಕೆ ಅವಕಾಶ ಬಂದಿದೆ ಎಂದರೆ ಆ ರೇಷ್ಮೆಯಿಂದ ಮಾತ್ರ ಸಾಧ್ಯವಾಗಿರುವುದು. ನೀವು ಕಳೆದ ೩ ವರ್ಷದಿಂದ ನೀವು ನಮಗೆ ಕೊಟ್ಟಿರತಕ್ಕಂಥ ಚಿತ್ರಹಿಂಸೆಗೆ ನಮ್ಮ ನಾಡು ಈ ಮಟ್ಟಕ್ಕೆ ಬಂದಿದೆ. ಕಳೆದ ಮೂರ್‍ನಾಲ್ಕು ವರ್ಷಗಳಿಂದ ಈ ರೇಷ್ಮೆಗೆ ಗಂಟು ರೋಗ ಎಂಬ ಮಾರಿ ತಗುಲಿತ್ತು. ಇದೇ ಸದನದಲ್ಲಿ ಅದರ ಬಗ್ಗೆ ಸಾಕಷ್ಟು ಚರ್ಚೆ ಆಯಿತು. ಗಂಟು ರೋಗದ ಬಗ್ಗೆ ಆ ಕಡೆ ಕುಳಿತಿರುವ ಮಾನ್ಯ ಮಂತ್ರಿಗಳು ಬಹಳ ವೀರಾವೇಶದಿಂದ ಆಡಿದ ಮಾತುಗಳನ್ನು ಕೇಳಿದೆವು. ಅವರ ಮಾತುಗಳನ್ನು ಕೇಳಿದ ಮೇಲೆ ನಮಗೆ ಅನಿಸಿದ್ದುದು ಈ ಗಂಟು ರೋಗ ಈ ದೇಶದಲ್ಲಿ ಇರುವುದೇ ಇಲ್ಲವೇನೋ ಎಂದು ಆದರೆ ಅದು ಏನೂ ಆಗಲಿಲ್ಲ. ಈಗಲೂ ಸಹಾ ಗಂಟು ರೋಗದಿಂದ ರೇಷ್ಮೆ ಪಾರಾಗಲಿಲ್ಲ. ಗಂಟು ರೋಗದಿಂದ ರೇಷ್ಮೆ ಉತ್ಪಾದನೆ ಕಡಿಮೆಯಾಗುವುದು ಒಂದು ಕಡೆಯಾದರೆ, ಇನ್ನೊಂದು ಕಡೆ ಹೂಜಿ ನೊಣದ ಕಾಟ. ಇದಲ್ಲದೆ ಇದರ ಜೊತೆಗೆ, ಇನ್ನೂ ನಾನಾ ರೋಗಗಳಿವೆ. ಅದರ ವಿಚಾರ ಹೆಚ್ಚಿಗೆ ಪ್ರಸ್ತಾಪ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಎಲ್ಲೆಲ್ಲಿ ಏನು ನಡೆಯುತ್ತಿದೆಯೆಂದು ಹೇಳುವುದಕ್ಕೆ ಹೋಗುವುದಿಲ್ಲ. ಇಷ್ಟೆಲ್ಲಾ ಕಷ್ಟಪಟ್ಟು ಹಗಲೂರಾತ್ರಿ ೨೪ ಗಂಟೆ ರೇಷ್ಮೆ ಬೆಳೆಯನ್ನು ಕಾಯಬೇಕಾಗುತ್ತದೆ. ಅರ್ಧ ರಾತ್ರಿಯಲ್ಲಿ ಎದ್ದು ಸೊಪ್ಪು ಹಾಕಬೇಕಾಗುತ್ತದೆ. ಮಕ್ಕಳುಮರಿಯಿಂದ ಹಿಡಿದು ಮುದುಕರವರೆಗೂ ರೇಷ್ಮೆಯಲ್ಲಿ ಕೈ ಇಟ್ಟುಕೊಂಡಿರ ಬೇಕಾಗುತ್ತದೆ.

ಈ ಕಸುಬನ್ನು ನಂಬಿರತಕ್ಕಂಥ, ಇದರಿಂದ ಜೀವನ ಮಾಡತಕ್ಕಂಥವರು ೩೫ ಲಕ್ಷ ಜನರಿದ್ದಾರೆ. ಇಂಥ ರೇಷ್ಮೆಗೆ ಕಳೆದ ೩-೪ ವರ್ಷಗಳಿಂದ ಗಂಟು ರೋಗ ಬಂತು. ಇದರಿಂದ ಇನ್ನೂ ತೇರ್ಗಡೆಯಾಗಿಲ್ಲ. ಮಾನ್ಯಮಿತ್ರರು ನೀರಿನ ಬಗ್ಗೆ ಹೇಳಿದ್ದಾರೆ, ಆದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಿಲ್ಲ. ವಿದ್ಯುತ್ ಸರಬರಾಜಿನ ಬಗ್ಗೆಯಾ ಕೂಡ ಬೇರೆ ಸಂದರ್ಭದಲ್ಲಿ ಚರ್ಚೆಮಾಡುತ್ತೇನೆ. ಇಷ್ಟೆಲ್ಲಾ ಕಷ್ಟಪಟ್ಟು ಮಾಡುವಂಥ ರೇಷ್ಮೆಯ ಬೆಲೆಯು ಇಂದು ನೆಲ ಕಚ್ಚಿದೆ. ಒಂದು ಕಡೆ ರೇಷ್ಮೆ ಬೆಳೆಯಲು ಬೇಕಾದಂಥ ಅವಶ್ಯಕತೆಗಳು ಏನಿವೆ, ಗೊಬ್ಬರ ಔಷಧಿ, ಸಲಕರಣೆಗಳು, ಇನ್ನಿತರ ವಸ್ತುಗಳ ಬೆಲೆ ಏರಿದೆ. ೪-೫ರೂ. ಗಳಿಗೆ ಸಿಗುತ್ತಿದ್ದ ತಟ್ಟೆಯ ಬೆಲೆಯು ಇಂದು ೧೦೦ ರೂ.ಗಳ ತನಕ ಹೋಗಿದೆ. ೮-೧೦ ರೂ.ಗಳಿಗೆ ಸಿಗುತ್ತಿದ್ದ ಚಂದ್ರಿಕೆಯ ಬೆಲೆ ೨೦ ರೂ.ಗಳ ತನಕ ಏರಿದೆ. ಆ ಬಗ್ಗೆ ಬೇಡಿಕೆಗಳು ಬಂದಾಗ ಚರ್ಚೆ ಮಾಡೋಣ. ಈ ಸಭೆಯ ಮೂಲಕ ಕೇಂದ್ರ ಸರ್ಕಾರದ ಗಮನಕ್ಕೆ ತರಬೇಕಾದ ವಿಚಾರ, ಈ ರೇಷ್ಮೆಗೂಡಿನ ಬೆಲೆಯು ಕಳೆದ ಫೆಬ್ರವರಿಗೂ ಈ ಫೆಬ್ರವರಿಗೂ ಹೋಲಿಸಿದರೆ, ನೂರಕ್ಕೆ ನೂರರಷ್ಟು ಕಡಿಮೆಯಾಗಿದೆ. ಕೇಂದ್ರ ಸರ್ಕಾರದವರು ಅಕ್ಕಿ, ಸಕ್ಕರೆ ಬೆಲೆ ಏರಿಸಿದ ಬಗ್ಗೆ ಇಲ್ಲಿ ಚರ್ಚೆಯಾಯಿತು. ಇವರಿಂದ ನನಗೆ ಸಂತೋಷ, ಇದರಿಂದಾಗಿ ರೈತರಿಗೆ ಮೂರು ಪೈಸೆ ಸಿಗುತ್ತದೆ ಎಂಬ ಸಂತೋಷ ನನಗೆ ಇದೆ. ರಾಜ್ಯ ಮತ್ತು ಕೇಂದ್ರ ಸರ್ಕಾರದವರು ರಾಜ್ಯದಲ್ಲಿರುವ ರೇಷ್ಮೆ ಬೆಳೆಗಾರರನ್ನು ಮರಣಹೋಮ ಮಾಡಲು ದೃಢವಾದ ನಿರ್ಧಾರ ಮಾಡಿದ್ದಾರೆ ಎಂದು ಕಾಣುತ್ತದೆ. ಈ ರೈತರನ್ನು ನಿರ್ನಾಮ ಮಾಡಬೇಕು, ಇವರಿಗೆ ಸ್ಮಶಾನ ಕೂಡ ಗುರುತು ಸಿಗಬಾರದು, ಅಂಥ ರೀತಿನೀತಿಗಳನ್ನು ಎರಡೂ ಸರಕಾರಗಳು ಅನುಸರಿಸುತ್ತಾ ಇದೆ. ರೇಷ್ಮೆಯನ್ನು ಹೊರದೇಶಗಳಿಂದ ತರಿಸತಕ್ಕಂಥ ಕಾರಣಗಳಾದರೂ ಏನು ಎಂಬ ಬಗ್ಗೆ ಮಾನ್ಯ ರಾಮಯ್ಯನವರು ಹೇಳಿದರು. ಇವೊತ್ತು ಈ ರೇಶ್ಮೆ ಇಲ್ಲದಿದ್ದರೂ ನಡೆಯುತ್ತದೆ ಬಟ್ಟೆ ಹಾಕದಿದ್ದರೆ ಯಾವ ಮನುಷ್ಯನೂ ಸಾಯುವುದಿಲ್ಲ. ಶೇಕಾಡ ಒಂದರಷ್ಟು ಕೂಡ ರೇಷ್ಮೆ ಬಟ್ಟೆಯನ್ನು ಹಾಕತಕ್ಕಂಥವರು ಇಲ್ಲ. ಪ್ರಪಂಚದಾದ್ಯಂತ ಇದು ಒಂದು ಅಗತ್ಯ ವಸ್ತು ಏನೂ ಅಲ್ಲ. ಇದೊಂದು ಭೋಗವಸ್ತು. ಇದನ್ನು ಉಪಯೋಗಿಸುವವರು ಕೇವಲ ಶ್ರೀಮಂತರು, ಇಂಥದ್ದರಲ್ಲಿ ಹೊರದೇಶಗಳಿಂದ ರೇಷ್ಮೆ ತರಿಸಿಕೊಂಡು ನಮ್ಮ ರೈತರನ್ನು ಸಮಾಧಿ ಮಾಡಲು ಸರ್ಕಾರದವರು ಹೊರಟಿದ್ದಾರೆ. ಹಿಂದಿನಿಂದಲೂ ರಾಜ್ಯ ಸರ್ಕಾರಗಳು ರೇಷ್ಮೆಯನ್ನು ಹೊರದೇಶಗಳಿಂದ ತರಿಸುವುದನ್ನು ವಿರೋಧ ಮಾಡಿಕೊಂಡು ಬಂದಿದೆ. ಆದರೆ ಆಮದನ್ನು

ನಿಲ್ಲಿಸುವುದಕ್ಕೆ ಕೇಂದ್ರ ಸರ್ಕಾರದಿಂದ ಸಾಧ್ಯವಾಗಲಿಲ್ಲ. ಈ ಸದನದಲ್ಲಿರತಕ್ಕ ಎಲ್ಲಾ ಸದಸ್ಯರ ಒತ್ತಡ ನಮ್ಮ ರಾಜ್ಯ ಮತ್ತು ಲೋಕಸಭಾ ಸದಸ್ಯರ ಒತ್ತಡ ಇಷ್ಟು ಇದ್ದರೂ ಕೂಡ ಇವೆಲ್ಲವನ್ನೂ ಮಿರತಕ್ಕಂಥ ಶಕ್ತಿ ಪೂನಾ, ಮುಂಬೈ ಮತ್ತು ಕಲ್ಕತ್ತಾದಲ್ಲಿರುವಂಥ ಕೆಲವು ವ್ಯಾಪರಸ್ಥರಿಗೆ ಇದೆ. ಈ ಜನರ ಜೀವನದಲ್ಲಿರತಕ್ಕಂಥ ಸರಕಾರಗಳು ಬಡ ರೈತರಿಗೆ ಅನುಕೂಲ ಮಾಡುವುದಿಲ್ಲ.

ಇಂಥವರ ಕಪಿಮುಷ್ಟಿಯಿಂದ ಬಿಡಿಸಿಕೊಳ್ಳತಕ್ಕಂಥ ಸರಕಾರ ಇನ್ನೂ ಕೇಂದ್ರದಲ್ಲಿ ಬರಬೇಕಾಗಿದೆ. ಕಳೆದ ವರ್ಷಕ್ಕೂ ಈ ವರ್ಷಕ್ಕೂ ಆದ ಬೆಲೆಯ ವ್ಯತ್ಯಾಸವನ್ನು ನೋಡಿದರೆ ಬುದ್ಧಿ ಇರತಕ್ಕಂಥ ರೈತನಾದರೆ ಅವರು ರೇಷ್ಮೆ ಕಡ್ಡಿಯನ್ನು ಕಿತ್ತು ಹಾಕಬೇಕು. ಆದರೆ ಕೆಲವು ಅಭ್ಯಾಸಗಳು ನಮಗೆ ರಕ್ತಗತವಾಗಿ ಬಂದಿವೆ. ಬೆಲೆ ಕಡಿಮೆಯಾದರೂ ಸಹ ಯಾವ್ಯಾವುದಕ್ಕೋ ಕೆಲಸಕ್ಕೆ ಅಂಟಿಕೊಂಡಿದ್ದೇವೆ ನಾನು ಮೊದಲಿನಿಂದ ರೇಷ್ಮೆ ಬೆಳೆಯುತ್ತಿದ್ದೆ ೧೦೦ ಕೆಜಿ ಗೂಡು ರೇಷ್ಮೆ ಬೆಳೆಯುತ್ತಿದ್ದವನು ಇಂದು ೫೦೦ ಕೆಜಿ ಬೆಳೆಯುತ್ತಿದ್ದೇನೆ, ೫೦೦ ಕೆಜಿ ಬೆಳೆಯುತ್ತಿದ್ದವನು ಸಾವಿರ ಕೆಜಿ ಬೆಳೆಯಬೇಕೆಂಬ ಒಂದು ಅಲೆ ಏನಿದೆ, ಒಣಪ್ರತಿಷ್ಠೆ ಏನಿದೆ ಅದಕ್ಕೆ ಇಂದು ನಮ್ಮ ರೈತರು ಬಲಿಯಾಗಿದ್ದಾರೆ. ಇನ್ನೊಂದು ಮುಖ್ಯವಾಗಿರುವ ಪ್ರಶ್ನೆಯೇನೆಂದರೆ ಇವತ್ತು ಬೆಳೆಇಟ್ಟರೆ ನಾಳೆ ಬರುವಂಥದ್ದಲ್ಲ ರೇಷ್ಮೆ ಪೂರ್ತಿಯಾಗಿ ರೇಷ್ಮೆ ಸೊಪ್ಪು ಬರಬೇಕಾದರೆ ಎರಡು ವರ್ಷ ಬೇಕಾಗುತ್ತದೆ ತೋಟ ಕುದುರಿ ಸೊಪ್ಪು ಬರಬೇಕಾದರೆ. ಇವತ್ತು ತಕ್ಷಣ ಕಿತ್ತುಹಾಕಿದರೆ ನಾಳೆ ಅಕಸ್ಮಾತಾಗಿ ಪುನಃ ಒಳ್ಳೆಯ ಧಾರಣೆ ಬರಬಹುದೆಂಬ ಆಸೆಯಿಂದ ರೇಷ್ಮೆ ಕಡ್ಡಿಯನ್ನು ಕೀಳುವ ಪರಿಸ್ಥಿತಿಯಲ್ಲಿ ಇವತ್ತು ರೈತರು ಇಲ್ಲ. ರೈತರ ಅಮಾಯಕ ಪರಿಸ್ಥಿತಿಯನ್ನು ಸತತವಾಗಿ ಈ ಸರ್ಕಾರಗಳು ದುರುಪಯೋಗ ಮಾಡಿಕೊಳ್ಳುತ್ತಾ ಬಂದಿವೆ. ಹಿಂದೆ ಒಂದು ಸಲ ಈ ದೇಶದಲ್ಲಿ ರೇಷ್ಮೆ ಬೆಳೆ ನಾಶಮಾಡುವ ಪ್ರಯತ್ನ ನಡೆಯಿತು, ಫ್ರಾನ್ಸ್‌ದೇಶದಲ್ಲೂ ಇಂತಹುದೇ ಪ್ರಯತ್ನಗಳು ನಡೆಯಿತು ಅಲ್ಲಿ ಗಂಟು ರೋಗಕ್ಕೆ ತುತ್ತಾಗಿ ರೇಷ್ಮೆ ಸರ್ವನಾಶವಾಗಿಹೋಯಿತು, ಇಲ್ಲಿಯವರೆಗೂ ಕೂಡ ಅದನ್ನು ಚೇತರಿಸಿಕೊಳ್ಳುವ ಪರಿಸ್ಥಿತಿ ಫ್ರಾನ್ಸ್‌ನಲ್ಲಿಲ್ಲ. ಅವರು ಕೈಗಾರಿಕರಣದಲ್ಲಿ ಮುಂದೆ ಬಂದಿದ್ದರಿಂದ ಅವರ ಬಗ್ಗೆ ಅವರು ತಲೆ ಕೆಡಿಸಿಕೊಳ್ಳುವ ಪರಿಸ್ಥಿತಿಯಿಲ್ಲ. ಆದರೆ ನಾವು ಇವತ್ತು ಕೈಗಾರಿಕೆಯಲ್ಲಿ ಮುಂದುವರೆದಿಲ್ಲ ನಮ್ಮದು ಕೃಷಿಪ್ರಧಾನವಾದ ದೇಶ. ಈ ಕಸುಬನ್ನು ಬಿಟ್ಟರೆ ಬೇರೆ ಕಸಬು ಗೊತ್ತಿಲ್ಲ. ರೈತರೂ ಸಹ ಅಷ್ಟೆ, ರೈತರು ರೇಷ್ಮೆ ಬೆಳೆಯುವವರು ಬೇರೆ ಕಸುಬಿಗೆ ಹೋಗಲು ಆಗುತ್ತಿಲ್ಲ ಕಾರಣವೇನೆಂದರೆ ಅವರು ರೇಷ್ಮೆ ಬೆಳೆಯುವುದರಲ್ಲಿ ಪರಿಣತಿ ಪಡೆದವರು. ಬೇರೆ ಬೆಳೆ ಮಾಡುವುದರಲ್ಲಿ ಅಷ್ಟೊಂದು ಪರಿಣತಿ ಪಡೆಯಲು ಸಾಧ್ಯವಾಗಿಲ್ಲ. ನಮ್ಮ ಜಿಲ್ಲೆಯಲ್ಲಿ ರೇಷ್ಮೆ ಬೆಳೆ ಬಿಟ್ಟರೆ, ಕಬ್ಬು ಬೆಳೆಯುವುದಕ್ಕೆ ಹತ್ತಿ ಬೆಳೆಯುವುದಕ್ಕೆ ಅವಕಾಶ ಇಲ್ಲ. ಆ ಕಾರಣದಿಂದ ಇವತ್ತು ಎಷ್ಟೇ ತೊಂದರೆ ಆದರೂ ಎಷ್ಟೇ ಬೆಲೆ ಕಡಿಮೆಯಾದರೂ ರೇಷ್ಮೆ ಬೆಳೆಯನ್ನೇ ನಾವು ನಂಬಿ ಅದನ್ನೇ ಮಾಡುತ್ತಿದ್ದೇವೆ. ಇಂಥ ಒಂದು ಕಸುಬನ್ನು ಸರ್ವನಾಶ ಮಾಡುವ ಪ್ರಯತ್ನ ಇವತ್ತು ಕೇಂದ್ರ ಸರ್ಕಾರದಿಂದ ನಡೆಯುತ್ತಿದೆ. ಉದಾಹರಣೆಗೆ ಹೇಳುತ್ತೇನೆ, ತೆಂಗಿನ ಕಾಯಿ ಬೆಲೆ ೬ ರಿಂದ ೮ರೂ. ವರೆಗಿದೆ. ಕೇರಳದಲ್ಲಿರುವ ಒಂದು ಪ್ರಬಲ ಶಕ್ತಿಯಿಂದ ತೆಂಗಿನಕಾಯನ್ನಾಗಲೀ ಕೊಬ್ಬರಿಯನ್ನಾಗಲೀ ಹೊರದೇಶದಿಂದ ತರಿಸುತ್ತಿಲ್ಲ. ನಮ್ಮದೇಶಕ್ಕಿಂತ ಕೊಬ್ಬರಿ ಬೆಲೆ ಹೊರದೇಶದಲ್ಲಿ ಕಡಿಮೆಯಿದೆ. ಆದರೂ ಕೇರಳದಲ್ಲಿರುವ ಪ್ರಬಲ ರಾಜಕೀಯ ಶಕ್ತಿಯ ಒತ್ತಡಕ್ಕೆ ಮಣಿದು ಕೊಬ್ಬರಿಯನ್ನು ಆಮದು ಮಾಡಿಕೊಳ್ಳುವುದಕ್ಕೆ ಕೇಂದ್ರಕ್ಕೆ ಅವಕಾಶ ಕೊಟ್ಟಿಲ್ಲ. ಆದರೆ ರೇಷ್ಮೆಗೆ ಮಾತ್ರ ಕೊಟ್ಟಿದ್ದಾರೆ, ಅದೂ ಇತ್ತೀಚಿನ ಕೇಂದ್ರದ ಉದಾರನೀತಿಯಿಂದ ಇವತ್ತು ಯಾರು ಎಷ್ಟು ಬೇಕಾದರೂ ರೇಷ್ಮೆ ತರಿಸಿಕೊಳ್ಳಬಹುದು. ಮಾನ್ಯ ರಾಮಯ್ಯನವರು ಹೇಳಿದರು ಮೂರು ತರಹ ಸ್ಕೀಂಗಳು ಇವೆ, ರಿಪ್ಲೆಸಿಶ್‌ಮೆಂಟ್ ಸ್ಕೀಂ, ಮತ್ತೆರಡು ರಿಕ್ವೈರ್‌ಮೆಂಟ್‌ನೋಡಿಕೊಂಡು ತರಿಸುತ್ತಾರೆ ಎಂದು. ಈಗ ಅದೆಲ್ಲಾ ಹೋಗಿದೆ ಕೇಂದ್ರಸರ್ಕಾರದ ತಪ್ಪು ನೀತಿಯಿಂದ ಯಾರು ಏನು ಬೇಕಾದರೂ ಹೊರದೇಶದಿಂದ ತರಬಹುದು ರೇಷ್ಮೆಗೆ

ಮಾತ್ರ ಈ ರೀತಿ ಅವಕಾಶ ಕೊಟ್ಟಿದ್ದಾರೆ. ಆದರೆ ಕೊಬ್ಬರಿಗೆ ಏಕೆ ಮಾಡುತ್ತಿಲ್ಲ? ಅದೇ ರೀತಿ ಕೇರಳದಲ್ಲಿ ರಬ್ಬರ್ ಬೆಳಿತಿದ್ದಾರೆ ರಬ್ಬರ್ ಆಮದು ಏಕೆ ಮಾಡುತ್ತಿಲ್ಲ? ಗಗನಮುಟ್ಟಿರುವ ಬೆಲೆಗಳು ಬೇಕಾದಷ್ಟಿವೆ, ಅವ್ಯಾವುದಕ್ಕೂ ಮಾಡಿಲ್ಲ. ರಾಜ್ಯದಲ್ಲಿ ಒಂದೇ ಪಕ್ಷದ ಸರ್ಕಾರ ಇದೆ. ನಿಮಗೆ ೧೮೦ ಸಂಖ್ಯೆಯ ದೈತ್ಯ ಬೆಂಬಲ ಇದೆ, ಆದರೆ ರಾಜಕೀಯವಾಗಿ ಇವರು ದುರ್ಬಲರು. ಇವರ ಬಲ ಏನೂ ಇಲ್ಲ ಅವರಿಗೆ ಶರಣಾಗತರಾಗಿದ್ದಾರೆ. ರಾಜಕೀಯ ಬಲ ಇಲ್ಲದಿರುವ ಕಾರಣದಿಂದ ಇಲ್ಲಿ ಆಡಳಿತ ನಡೆಸುವವರು ರಾಜಕೀಯವಾಗಿ ದುರ್ಬಲವಾಗಿರುವ ಕಾರಣದಿಂದ ಅವರ ಮರ್ಜಿಯಲ್ಲಿ ಇರುವ ಕಾರಣದಿಂದ ಇವರು ತಮ್ಮ ವರ್ಚಸ್ಸನ್ನು ಬೀರುವುದಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಆ ಕಾರಣದಿಂದ ಈ ವಿಫಲತೆಯನ್ನು ದುರುಪಯೋಗಪಡಿಸಿಕೊಳ್ಳುವುದಕ್ಕಾಗಿ ರೇಷ್ಮೆಯನ್ನು ಹೊರಗಡೆಯಿಂದ ತರಿಸುತ್ತಿದ್ದಾರೆ. ಇದಕ್ಕೆ ಇನ್ನೇನೂ ಕಾರಣವಿಲ್ಲ, ಇದನ್ನು ನಮ್ಮ ರಾಜ್ಯದ ರೈತರ ದೃಷ್ಟಿಯಿಂದ ತಕ್ಷಣ ನಿಲ್ಲಿಸಬೇಕಾಗಿದೆ. ನೀವು ಇವತ್ತಿನ ದಿವಸ ಒಂದು ಕಾನೂನು ಮಾಡಿ, ಮಾನ್ಯ ಬಂಗಾರಪ್ಪ ನವರು ಮುಖ್ಯಮಂತ್ರಿಗಳಾಗಿದ್ದಾಗ ಕಾವೇರಿ ನದಿ ನೀರಿನ ಬಗ್ಗೆ ಒಂದು ಆರ್ಡಿನೆನ್ಸ್ ತಂದರು. ನಾನು ಅದನ್ನು ಮೆಚ್ಚುತ್ತೇನೆ. ನೀವು ಕೂಡ ಸುಗ್ರೀವಾಜ್ಞೆಯನ್ನು ತಂದು ಇವತ್ತಿನ ದಿವಸ ಹೊರಗಡೆಯಿಂದ ರೇಷ್ಮೆ ತರುವುದಕ್ಕೆ ಬಿಡುವುದಿಲ್ಲ ಎನ್ನತಕ್ಕ ಕಾನೂನು ಮಾಡಿ. ಏನಾಗುತ್ತದೋ ನೋಡೋಣ. ನಿಮಗೆ ರಾಜ್ಯದ ಹಿತವನ್ನು ಕಾಪಾಡಬೇಕು ಎಂಬ ಮನಸ್ಸು ಇದ್ದರೆ ಹೊರಗಡೆಯಿಂದ ಒಂದು ಗ್ರಾಂ ರೇಷ್ಮೆಯನ್ನು ಕೂಡ ತರುವುದಕ್ಕೆ ಅವಕಾಶ ಕೊಡಬಾರದು, ಅದು ಚೈನಾದೇಶದ್ದೇ ಇರಲಿ, ಯಾವುದೇ ದೇಶದ್ದು ಇರಲಿ, ಕರ್ನಾಟಕ ರೇಷ್ಮೆಯನ್ನು ಬಿಟ್ಟು ಬೇರೆ ದೇಶದ ಒಂದು ಗ್ರಾಂ ರೇಷ್ಮೆಯನ್ನು ನಮ್ಮ ರಾಜ್ಯಕ್ಕೆ ಬರುವುದಕ್ಕೆ ಅವಕಾಶ ಕೊಡುವುದಿಲ್ಲ ಎನ್ನತಕ್ಕಂಥ ಒಂದು ನಿರ್ಧಾರವನ್ನು ಸರ್ಕಾರ ಮಾಡಲಿ, ಇದು ಸಾಧ್ಯ ಇದೆ. ನಿಮ್ಮ ಬಂಡವಾಳ ಏನು ಎನ್ನತಕ್ಕಂಥದ್ದು ನಮಗೆ ಗೊತ್ತಿದೆ. ನೀವು ಕೇಂದ್ರದಲ್ಲಿರತಕ್ಕಂಥವರ ದಾಸರು, ಅವರ ಮನೆ ಕಾಯತಕ್ಕಂಥ ದಾಸರು, ಅವರು ಮಾಲೀಕರು ನೀವು ದಾಸರು ಅವರು ಹೇಳಿದ್ದನ್ನು ನೀವು ಕೇಳಬೇಕಾಗುತ್ತದೆ. ಸಕ್ಕರೆ ಬೆಲೆ ಜಾಸ್ತಿ ಮಾಡಿದ್ದಾರೆ, ನಾವೇನು ಮಾಡಬೇಕು ಎಂದು ಹೇಳಬಹುದು, ನೀವು ಹೇಳಿದ್ದೀರಿ ನೀವು ರೇಷ್ಮೆಗೂ ಕೂಡ ಅದನ್ನೇ ಹೇಳುತ್ತೀರಿ, ಕೇಂದ್ರದವರು ತರಿಸಿದ್ದಾರೆ ನಾವೇನು ಮಾಡುವುದಕ್ಕಾಗುತ್ತದೆಂದು ಹೇಳುತ್ತೀರಿ. ನಿಮ್ಮ ಉತ್ತರ ಇಷ್ಟೆ ಬೇರೆ ಏನೂ ಹೇಳುವುದಕ್ಕೆಸಾಧ್ಯವಿಲ್ಲ, ನೀವು ಹೇಳುವುದೂ ಇಲ್ಲ ಎನ್ನತಕ್ಕಂಥ ನಂಬಿಕೆ ನಮಗೆ ಇವೆ. ಇವತ್ತು ರಾಜ್ಯದಲ್ಲಿರತಕ್ಕಂಥ ೩೫ ಲಕ್ಷ ರೈತರನ್ನು ಕಾಪಾಡುವ ಇಚ್ಛೆಇದ್ದರೆ, ಕೋಲಾರ ಜಿಲ್ಲೆ, ಮೈಸೂರು ಜಿಲ್ಲೆ, ಬೆಂಗಳೂರು ಜಿಲ್ಲೆ ಮಂಡ್ಯದ ಸ್ವಲ್ಪ ಭಾಗ, ಇತ್ತೀಚೆಗೆ ಕೆಲವು ಹೊಸ ಹೊಸ ಭಾಗಗಳಿಂದ ಬಳ್ಳಾರಿ, ಬಿಜಾಪುರ ಮತ್ತು ಶಿವಮೊಗ್ಗ ಜಿಲ್ಲೆಯಲ್ಲೂ ರೇಷ್ಮೆ ಬೆಳೆಯತಕ್ಕಂಥ ಒಂದು ಪ್ರಯತ್ನ ನಡೆಯುತ್ತಿದೆ. ಇದರ ವಿಸ್ತೀರ್ಣ ಕೂಡ ಹೆಚ್ಚಾಗುತ್ತಿದೆ, ಇವರನ್ನು ರಕ್ಷಣೆ ಮಾಡಬೇಕೆಂಬ ಮನಸ್ಸು ಇದ್ದರೆ, ಈ ದಿವಸವೇ ಒಂದು ಬಿಲ್ಲನ್ನು ತನ್ನಿ, ಇನ್ನು ಎರಡು ತಿಂಗಳ ಕಾಲ ಅಧಿವೇಶನ ನಡೆಯುತ್ತದೆ, ಒಂದು ಬಿಲ್ಲನ್ನು ತನ್ನಿ, ನಾವು ಸರ್ವಾನುಮತದಿಂದ ಒಪ್ಪುತ್ತೇವೆ. ಆಗ ಯಾರು ಏನು ಮಾಡುತ್ತಾರೋ ನೋಡೋಣ ಕೇಂದ್ರ ಸರ್ಕಾರ ಹಣದ ಚೀಲಗಳ ಮರ್ಜಿಯಿಂದ ನಡೆಯುತ್ತಿದೆ. ಅದನ್ನು ಎದುರಿಸತಕ್ಕಂಥ ತಾಕತ್ತು ನಿಮಗಿದ್ದರೆ ಒಂದು ಕಾನೂನನ್ನು ಇವತ್ತಿನ ದಿವಸ ತನ್ನಿ, ಏತಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದನ್ನು ತೋರಿಸಿಕೊಡೋಣ. ಇದನ್ನು ನೀವು ಮಾಡುವುದಕ್ಕೆ ತಯಾರಿಲ್ಲ. ಇದನ್ನು ನೀವು ಪಕ್ಷಾತೀತವಾಗಿ ನೋಡಬೇಕಾಗಿದೆ. ನಾನು ಹೊರಗಡೆ ನಿಂತಿದ್ದರೂ ಇದೇ ಮಾತನ್ನು ನಾನು ಆಡುತ್ತಿದ್ದೆ, ಇಲ್ಲಿ ನಿಂತು ಮಾತನಾಡಿದ್ದರೂ ಕೂಡ ಇದೇ ಮಾತನ್ನು ನಾನು ಇದೇ ಮಾತನ್ನು ಆಡುತ್ತಿದ್ದೇನೆ. ಏಕೆಂದರೆ ಇವತ್ತಿನ ದಿವಸ ಪರಿಸ್ಥಿತಿ ಆ ಮಟ್ಟಕ್ಕೆ ಬಂದಿದೆ. ಕೇಂದ್ರಸರ್ಕಾರಕ್ಕೆ ನೀವು ತೀವ್ರವಾದಂಥ ಪ್ರತಿಭಟನೆಯನ್ನು ಸಲ್ಲಿಸುವುದು ಅಷ್ಟೇ ಅಲ್ಲ, ಈ ಸದನದಲ್ಲಿ ಒಂದು ನಿರ್ಣಯ ಕೊಡಬೇಕಾಗಿದೆ. ಕೇಂದ್ರಸರ್ಕಾರ, ನೂರಕ್ಕೆ ನೂರರಷ್ಟು ಹೊರಗಡೆಯಿಂದ

ರೇಷ್ಮೆಯನ್ನು ತರತಕ್ಕಂಥ ಅವಶ್ಯಕತೆ ಇಲ್ಲ. ಇದಕ್ಕೆ ನಮ್ಮ ವಿರೋಧ ಇದೆ ಎಂದು ಸದನದಲ್ಲಿ ತತ್‌ಕ್ಷಣ ಒಂದು ನಿರ್ಣಯವನ್ನು ಮಾಡೋಣ. ವಿರೋಧ ಪಕ್ಷದವರು ತಂದರೆ ರಾಜಕೀಯದ ದುರ್ಲಾಭ ಪಡೆಯುತ್ತಾರೆಂದು ತಾವು ಹೇಳಬಹುದು, ನಾವು ತರುವುದು ಬೇಡ. ವಾಸ್ತವಾಂಶ ನಿಮಗೆ ಗೊತ್ತಿದೆ. ನಿಮಗೆ ಗೊತ್ತಿಲ್ಲ ಎಂದು ಹೇಳತಕ್ಕಂಥವನು ನಾನಲ್ಲ. ಈ ಸದನದಲ್ಲಿ ಇವತ್ತಿನ ದಿವಸವೇ ಒಂದು ನಿರ್ಣಯ ಮಾಡಿ, ಸರ್ವಾನುಮತದಿಂದ ಆ ನಿರ್ಣಯವನ್ನು ಅಂಗೀಕರಿಸೋಣ. ಇದನ್ನು ನೀವು ತತ್‌ಕ್ಷಣದಿಂದ ರದ್ದು ಮಾಡದೆ ಹೋದರೆ. ಈ ಉದ್ಯಮ ಹಾಳಾಗಿ ಹೋಗುತ್ತಿದೆ, ನೂರಾರು ವರ್ಷಗಳಿಂದ ಬೆಳೆದು ಬಂದಿರತಕ್ಕಂಥ ಉದ್ಯಮ ಹಾಳಾಗಿ ಹೋಗುತ್ತಿದೆ. ಹಾಳಾಗುವುದಕ್ಕೆ ಬಿಡುವುದಿಲ್ಲ ಎನ್ನತಕ್ಕಂಥ ಒಂದು ದೃಢ ನಿರ್ಧಾರವನ್ನು ಇವತ್ತಿನ ದಿವಸ ಮಾಡಿ ಇದು ಯಾವುದು ಇಲ್ಲದಿದ್ದರೆ ನೀವು ವಂಚಕರು, ಈ ರೇಷ್ಮೆ ಬೆಳೆಯನ್ನು ಎಲ್ಲಿ ಮಾಡುತ್ತಿದ್ದಾರೆ, ಆ ರೈತರ ಮರಣಹೋಮ ಮಾಡುವುದಕ್ಕೆ ನೀವು ತಯಾರಾಗುತ್ತಿದ್ದೀರಿ ಎನ್ನುವ ಮಾತನ್ನು ಆ ಭಾಗದ ರೈತರು ಹೇಳುತ್ತಿದ್ದಾರೆ. ನಿಮ್ಮ ಮುಖಕ್ಕೆ ಹೇಳುತ್ತಾರೆ ಎಂದು ಹೇಳುತ್ತೇನೆ. ಇಷ್ಟೆಲ್ಲಾ ಹೇಳಿದ ಮೇಲೂ ಕೂಡ ನೀವು ಏನೂ ತರದಿದ್ದರೆ ಇಂಥ ನಿರ್ವೀರ್ಯ ಸರ್ಕಾರ ಇಲ್ಲ, ಈ ನಿರ್ವೀರ್ಯ ಸರ್ಕಾರಕ್ಕೆ ಜನರು ಪಾಠ ಕಲಿಸುತ್ತಾರೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನೀವು ನಿರ್ವೀರ್ಯರಲ್ಲ ಎಂದು ಸಾಬೀತುಪಡಿಸಬೇಕಾಗಿದ್ದರೆ ಇವತ್ತಿನ ದಿವಸ ಒಂದು ನಿರ್ಣಯವನ್ನು ತನ್ನಿ. ಹೊರಗಡೆಯಿಂದ ಒಂದು ಗ್ರಾಂ ರೇಷ್ಮೆಯನ್ನು ನಾವು ತರುವುದಕ್ಕೆ ಅವಕಾಶ ಕೊಡುವುದಿಲ್ಲ ಎನ್ನತಕ್ಕಂಥ ಒಂದು ಕಾನೂನನ್ನು ತನ್ನಿ. ಅಂತಹ ಕಾನೂನನ್ನು ತಂದು ಇದನ್ನು ರಕ್ಷಣೆ ಮಾಡಬೇಕು ಎಂದು ಆಗ್ರಹವನ್ನು ಮಾಡುತ್ತೇನೆ. ಇದರ ಬಗ್ಗೆ ವಿವರವಾದಂಥ ಚರ್ಚೆಯಾಗಬೇಕಾಗಿದೆ. ಏಕೆಂದರೆ ಮಾರುಕಟ್ಟೆಗಳು ಇವೆ. ಮಾರುಕಟ್ಟೆಯ ವಿಚಾರದಲ್ಲಿ ಸಾಕಷ್ಟು ಮಾತನಾಡಬೇಕಾದ ಅವಶ್ಯಕತೆಇದೆ. ನಾನು ಅದನ್ನು ಪ್ರಸ್ತಾಪ ಮಾಡುತ್ತಿಲ್ಲ. ರೈತರಿಗೆ ಏನೇನು ತೊಂದರೆಗಳು ಇವೆ ಮತ್ತು ರೋಗರುಜಿನಗಳ ಬಗ್ಗೆ ಪ್ರಸ್ತಾಪ ಮಾಡಬೇಕಾಗಿದೆ, ಅವೆಲ್ಲವನ್ನು ಕೂಡ ನಾನು ಈಗ ಪ್ರಸ್ತಾಪ ಮಾಡುತ್ತಿಲ್ಲ. ನಾವು ತಂದಿರತಕ್ಕಂಥ ಈ ಸೂಚನೆಯನ್ನು ತಾವು ಒಪ್ಪಿ ವಿವರವಾದಂತಹ ಚರ್ಚೆಗೆ ತಾವು ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಡಾ||. ಎಸ್.ಬಿ. ನಂಜಪ್ಪ:- ನಿರ್ವೀರ್ಯ ಎನ್ನುವುದಕ್ಕೆ ವಿವರಣೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ವಿವರಣೆ ಕೊಡುವುದಕ್ಕಾಗುವುದಿಲ್ಲ, ಬಹಳ ಕಷ್ಟವಾಗುತ್ತದೆ. ಅವರೇ ಡಾಕ್ಟರು ಆಗಿದ್ದಾರೆ ವಿಚಾರಣೆ ಮಾಡಿಕೊಳ್ಳಬೇಕು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಇದು ನಿಲುವಳಿ ಸೂಚನೆ.

ಶ್ರೀ ಆರ್.ವಿ. ದೇಶಪಾಂಡೆ:- ಈ ನಿಲುವಳಿ ಸೂಚನೆಗೆ ೮ ಜನ ಸಹಿ ಮಾಡಿದ್ದೇವೆ. ನಾನು ಮಾತನಾಡುತ್ತಿಲ್ಲ, ಮಾನ್ಯ ಸಿಂಧ್ಯರವರು ಮಾತನಾಡುತ್ತಿದ್ದಾರೆ. ಇದು ಬಹಳ ಗಂಭೀರವಾದಂತಹ ಸಮಸ್ಯೆಯಾಗಿದೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಬೇರೆ ರೂಪದಲ್ಲಿ ಒಂದು ದಿವಸ ಬೇಕಾದರೆ ಚರ್ಚೆ ಮಾಡಿ, ನಮ್ಮದು ಏನೂ ಅಡ್ಡಿಇಲ್ಲ.

ಶ್ರೀ ಆರ್.ವಿ. ದೇಶಪಾಂಡೆ:- ನೀವು ಮಾಡಿಬಿಡಿ, ಗೌರ್ನಮೆಂಟ್ ಆಫ್ ಇಂಡಿಯಾಕ್ಕೆ ಹೇಳಿ import ಬಂದು ಮಾಡಿಬಿಡ್ಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನೀವು ಒಂದು ಬಿಲ್ಲನ್ನು ಈಗ ಇಂಟರ್‌ಡ್ಯೂಸ್ ಮಾಡಿ ಇಂಪೋರ್ಟ್ ಏನು ಮಾಡಿಕೋಳ್ಳುತ್ತಿದ್ದಾರೆ, ಕರ್ನಾಟಕದ ಒಳಗಡೆ ಬರತಕ್ಕಂಥ ಸಿಲ್ಕ್‌ನ ಮೇಲೆ ನಾವು ಆನ್‌ಪಾರ್ ವಿತ್‌ದಿ ಲೋಕಲ್ ಸಿಲ್ಕ್ ರೇಟ್‌ನ್ನು ನೀವು ನೇಕಾರರಿಗೆ ತುಂಬಿ ಕೊಟ್ಟುಬಿಡಿ. ಆಗ ನಾವು ಮಾತೇ ಆಡುವುದಿಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಆದರೆ ನಿಲುವಳಿ ಸೂಚನೆಯ ಮೇಲೆ ದಿವಸವೆಲ್ಲಾ ಚರ್ಚೆ ಮಾಡುವುದು ಯಾವ ಸಂಪ್ರದಾಯ.

*ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರು ಈ ಸದನಕ್ಕೆ ಬಹಳ ಹಿರಿಯ ಸದಸ್ಯರು. ಅವರು ಈಗ ಮುಂದಿನ ಸಾಲಿನಲ್ಲಿ ಇದ್ದಾರೆ. ಹಿಂದೆ ಅವರು ಇಲ್ಲಿ ಕುಳಿತುಕೊಂಡಿದ್ದಾಗ ೫-೬ ಗಂಟೆ ಒಂದೊಂದು ನಿಲುವಳಿ ಸೂಚನೆಯ ಬಗ್ಗೆ ಮಾತನಾಡಿದ್ದಾರೆ. ನಿಮ್ಮ ಪುಣ್ಯ ನಾವು ಈಗ ೧೦-೧೫ ನಿಮಿಷದಲ್ಲಿ ಮುಗಿಸಿಬಿಡುತ್ತೇವೆ. ನಮ್ಮ ವಿರೋಧಪಕ್ಷದ ನಾಯಕರಾದಂತಹ ಮಾನ್ಯ ದೇಶಪಾಂಡೆಯವರು, ಮಾನ್ಯ ವೈ.ಕೆ. ರಾಮಯ್ಯನವರು, ಮಾನ್ಯ ಬೈರೇಗೌಡರು, ಮಾನ್ಯ ವಾಟಾಳ್ ನಾಗರಾಜ್‌ರವರು ನಾವೆಲ್ಲಾ ಈ ರಾಜ್ಯದಲ್ಲಿ ಟೀಪುಸುಲ್ತಾನರ ಕಾಲದಿಂದ ಇರತಕ್ಕಂಥ ಈ ಉದ್ಯೋಗ ಸರ್ವನಾಶವಾಗುತ್ತಿರುತಕ್ಕ ಕಾಲ ಬಂದಿದೆ, ಸುಮಾರು ೩೫ ಲಕ್ಷ ಜನ ರೈತರಿಗೆ ನಾಲ್ಕು ಲಕ್ಷಕ್ಕೂ ಹೆಚ್ಚು ಕುಟುಂಬಗಳನ್ನು ನಾಶಮಾಡತಕ್ಕ ಕಾಲ ಬಂದಿದೆ, ಆದಕ್ಕೋಸ್ಕರವಾಗಿ ತಾವು ಈ ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಂಡಬೇಕೆಂದು ನಿಮ್ಮ ಮನಸ್ಸನ್ನು ಓಲಿಸಿಕೊಳ್ಳುವುದಕ್ಕೆ ೪-೫ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿದ್ದೇವೆ ಅಷ್ಟೆ.

ನಾನು ರೇಷ್ಮೆ ವ್ಯವಸಾಯದ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ನಿಲುವಳಿ ಸೂಚನೆಗೆ ನೀವು ಅವಕಾಶವನ್ನು ಮಾಡಿಕೊಡಿ. ಅದಾದನಂತರ ರೇಷ್ಮೆ ವ್ಯವಸಾಯದ ಬಗ್ಗೆ ಮಾತನಾಡೋಣ. ಏಕೆಂದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕೋಲಾರ ಜಿಲ್ಲೆ, ತುಮಕೂರು ಜಿಲ್ಲೆ, ಮೈಸೂರುಜಿಲ್ಲೆ, ಮಂಡ್ಯ ಜಿಲ್ಲೆಯ ಕೆಲವು ಭಾಗ, ಇದಲ್ಲದೆ ಉತ್ತರ ಕರ್ನಾಟಕದ ಮತ್ತು ಮುಂಬೈಕರ್ನಾಟಕದಲ್ಲೂ, ಹಾಸನದ ಕೆಲವು ಭಾಗದಲ್ಲಿ ರೇಷ್ಮೆ ವ್ಯವಸಾಯವನ್ನು ಬಹಳಷ್ಟು ದೊಡ್ಡ ಆಸೆಯನ್ನು ಇಟ್ಟುಕೊಂಡು ನಮ್ಮ ರೈತರು ಪ್ರಾರಂಭ ಮಾಡಿದರು. ಸರ್ಕಾರಗಳು ಸಹಿತ ವಿಶ್ವಬ್ಯಾಂಕಿನಿಂದ ಸುಮಾರು ೧೨೦ ಕೋಟಿ ರೂಪಾಯಿ ಸಾಲವನ್ನು ಇದುವರೆಗೂ ತೆಗೆದುಕೊಂಡು ಕೆಲವು ಜಿಲ್ಲೆಗಳಲ್ಲಿ, ಬೆಳಗಾವಿಯಲ್ಲಿ ಕಟ್ಟಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ, ಎಲ್ಲಾ ಜಿಲ್ಲೆಗಳಲ್ಲಿಯೂ ಸಹಿತ ದೊಡ್ಡ ದೊಡ್ಡ ಕಟ್ಟಡಗಳನ್ನು ಈಗಾಗಲೇ ಕಟ್ಟಿದ್ದಾರೆ, ರೇಷ್ಮೆ ಮಾರುಕಟ್ಟೆಗೋಸ್ಕರ ಗ್ರೈನೇಜ್ ಗೋಸ್ಕರ ಮೊಟ್ಟೆಗಳನ್ನು ಮಾಡಲಿಕ್ಕೆಂದು ಹೇಳಿ ಕಟ್ಟಿದ್ದಾರೆ. ಆದರೆ ಇದರ ಮೇಲೆ ರೈತರು ಅಷ್ಟೆ ಅಲ್ಲ ನೂಲು ಬಿಚ್ಚುವಂತಹ ಜನ ಇದ್ದಾರೆ, ಹುರಿ ಮಾಡತಕ್ಕಂಥ ರೀಲರ್ಸ್ ಇದ್ದಾರೆ. ಅದಾದಮೇಲೆ ವೇವರ್ಸ್ ಇದ್ದಾರೆ. ಸುಮಾರು ನಮ್ಮ ರಾಜ್ಯದ ಜನಸಂಖ್ಯೆಯ ೧೦ ಜನಕ್ಕೆ ಒಬ್ಬರು ೪೦-೫೦ ಲಕ್ಷ ಜನ ಇದರ ಮೇಲೆ ಅವಲಂಬಿಸಿಕೊಂಡಿರತಕ್ಕಂಥ ಜನ ಇದ್ದಾರೆ. ಇದು ಇವತ್ತು ಕರ್ನಾಟಕದ ರೈತರ ಪ್ರಶ್ನೆ ಅಲ್ಲ. ನಮ್ಮ ಪಕ್ಕದ ತಮಿಳುನಾಡಿನಲ್ಲಿ ಆಂಧ್ರದಲ್ಲಿ ಪ್ರತಿಯೊಂದು ರಾಜ್ಯದಲ್ಲಿಯೂ ಸಹಿತ ರೇಷ್ಮೆ ವ್ಯವಸಾಯ ಬಹಳ ಪ್ರವರ್ದಮಾನಕ್ಕೆ ಬರುತ್ತಿರತಕ್ಕ ಸಂದರ್ಭ ಇದೆ. ಇಡೀ ರಾಷ್ಟ್ರದಲ್ಲಿ ಸುಮಾರು ೮ ಸಾವಿರ ಟನ್‌ನಷ್ಟು ರೇಷ್ಮೆ ಉತ್ಪತ್ತಿಯಾಗುತ್ತಿದೆ. ಅದರಲ್ಲಿ ನಾಲ್ಕೂವರೆ ಸಾವಿರದಿಂದ ಐದು ಸಾವಿರ ಟನ್ ರೇಷ್ಮೆಯನ್ನು ಕರ್ನಾಟಕ ರಾಜ್ಯ ಒಂದೇ ಉತ್ಪತ್ತಿ ಮಾಡುತ್ತದೆ. ಅಂದರೆ ಶೇಕಡ ೬೦ಕ್ಕೂ ಹೆಚ್ಚಿನಷ್ಟು ರೇಷ್ಮೆಯನ್ನು ಇಡೀ ರಾಷ್ಟ್ರಕ್ಕೆ ನಾವು ಉತ್ಪಾದನೆ ಮಾಡಿ ಕೊಡುತ್ತಿದ್ದೇವೆ. ಆದರೆ ಇವತ್ತು ನಮ್ಮ ಪರಿಸ್ಥಿತಿ ಏನಾಗಿದೆ ಅಂದರೆ ಅಂತರರಾಷ್ಟ್ರೀಯ ಮಾರಕಟ್ಟೆಯಲ್ಲಿ ತೆಗೆದುಕೊಂಡಾಗ ಚೈನಾಗೆ ನಾವು ಪ್ರತಿಸ್ಪರ್ಧಿಯಾಗಿ ಇದ್ದವರು. ನಾವು ಹೊರದೇಶಕ್ಕೆ ಕಳುಹಿಸುತ್ತಿದ್ದ ನಮ್ಮ ರೇಷ್ಮೆ ವಹಿವಾಟು ಸುಮಾರು ೫೦೦

ಕೋಟಿ ರೂಪಾಯಿಗಳು. ಪ್ರತಿ ವರ್ಷವು ಸಹ ನಾವು ರೇಷ್ಮೆಯನ್ನು ಹೊರ ದೇಶಗಳಿಗೆ ಕಳುಹಿಸಿ ಕೊಂಡು ಬಂದಿದ್ದೇವೆ. ಆದರೆ, ಇವೊತ್ತು ಚೈನಾ ದೇಶದವರಿಗೆ ನಮ್ಮ ದೇಶದ ಮೇಲೆ ಕಣ್ಣು ಬಿದ್ದಿದೆ. ಕೇಂದ್ರ ಸರ್ಕಾರ ಮಾಡಿ ಕೊಂಡಿರತಕ್ಕ ಒಂದು ರೈತ ವಿರೋಧ ಒಪ್ಪಂದದಿಂದಾಗಿ, ಕಾರ್ಮಿಕ ವಿರೋಧ ಒಪ್ಪಂದದಿಂದಾಗಿ ಈ ರೇಷ್ಮೆ ಉದ್ಯಮಕ್ಕೆ ದೊಡ್ಡ ಪೆಟ್ಟು ಬೀಳತಕ್ಕಂಥ ಸಂಭವವಿದೆ. ಈ ವರ್ಷ ಚೈನಾದಲ್ಲಿ ಸುಮಾರು ಶೇಕಡಾ ೬೦ ರಷ್ಟು ಅವರು ಬೆಳೆಯತಕ್ಕಂಥ ರೇಷ್ಮೆಯ ಉತ್ಪನ್ನ ಜಾಸ್ತಿಯಾಗಿದೆ. ಕಳೆದ ವರ್ಷ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅವರು ಒಂದು ಕಿಲೋ ರೇಷ್ಮೆಯನ್ನು ೫೦ ಡಾಲರುಗಳಿಗೆ ಸರಬರಾಜು ಮಾಡುತ್ತಿದ್ದರು. ಈ ವರ್ಷ ಅವರು ೨೦ ಡಾಲರುಗಳಿಗೆ ಮಾರುವುದಕ್ಕೆ ತಯಾರಿದ್ದಾರೆ. ಇದಕ್ಕೆ ಕಾರಣ ಅವರಿಗೆ ಭಾರತ ದೇಶದ ರೈತರ ಬಗ್ಗೆ ಅಭಿಮಾನ ಇದೆಯೆ? ಅಥವಾ ಭಾರತ ದೇಶದ ನೇಕಾರರ ಬಗ್ಗೆ ಅಭಿಮಾನ ಇದೆಯೆ? ಅದು ಅಲ್ಲ. ಭಾರತ ದೇಶದಲ್ಲಿರತಕ್ಕಂಥ ರೇಷ್ಮೆ ಬೆಳೆಗಾರರು ಮಾತ್ರ ಅವರಿಗೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪ್ರತಿಸ್ಪರ್ಧಿಯಾಗಬಹುದೆನ್ನುವುದು ಅವರಿಗೆ ಗೊತ್ತಿದೆ. ಆದುದರಿಂದ, ಅವರು ನಮಗೆ ಒಂದು ಸಂಪೂರ್ಣವಾಗಿ ಒಂದು ಅಗ್ರಿಮೆಂಟ್ ಮಾಡಿಕೊಡುತ್ತಾರೆ. ನೂರು ವರ್ಷ ನಾವು ಕೊಡುತ್ತೀವೆಂದು ಹೇಳಿದ್ದರೆ ಒಪ್ಪಿಕೊಳ್ಳಬಹುದಾಗಿತ್ತು. ಇಲ್ಲಿ ಸರ್ವನಾಶ ಆದ ತಕ್ಷಣ ಅದನ್ನು ರದ್ದುಮಾಡುತ್ತಾರೆ ಹಾಗಾಗಿ ದೇಶದಲ್ಲಿರತಕ್ಕಂಥ ಒಂದು ಕೋಟಿ ಜನ ರೈತರ ಪ್ರಶ್ನೆ ಬಿಡಿ, ಅವರಿಗೆ ಬೇರೆ ವ್ಯವಸಯ ಮಾಡಬಹುದು. ಆದರೆ, ನೂಲು ಬಿಚ್ಚತಕ್ಕಂಥ ಜನರು ಹುರಿ ಮಾಡತಕ್ಕಂಥ ಜನ, ರೇಷ್ಮೆ ಬಟ್ಟೆ ನೇಯತಕ್ಕಂಥ ಜನರು ಏನು ಮಾಡಬೇಕು ಎನ್ನತಕ್ಕಂಥ ಪ್ರಶ್ನೆ ಬರುತ್ತದೆ. ೨೯ ರಾಷ್ಟ್ರಗಳಿಂದ ನಾವು ಏನನ್ನೂ ತರಿಸಿಕೊಳ್ಳುವುದಿಲ್ಲವೆಂದು ಅಮೆರಿಕಾ ದೇಶದಲ್ಲಿ ನಿರ್ಬಂಧ ಮಾಡಿದ್ದಾರೆ. ಅಮೆರಿಕಾ ದೇಶದಲ್ಲಿ ಕಬ್ಬಿಣದ ಬೆಲೆ ಏನಿದೆ, ಅವರು ಏನು ಉತ್ಪಾದನೆ ಮಾಡುತ್ತಾರೆ, ಅದಕ್ಕಿಂತ ಕಡೆಮೆ ಬೆಲೆಯಲ್ಲಿ ಬೇರೆ ದೇಶಗಳು ಮಾಡುತ್ತಾರೆ. ಆ ೨೭ ರಾಷ್ಟ್ರಗಳಿಂದ ಏನನ್ನು ತರಿಸಿಕೊಳ್ಳುವುದಿಲ್ಲ. ಅಮೆರಿಕಾ ದೇಶದವರು **Anti Dumping Law** ಎಂಬ ಹೊಸದಾದ ಕಾನೂನನ್ನು ಮಾಡಿದ್ದಾರೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಿಂದ ಈ ತರಹ ಡಂಪ್ ಮಾಡುತ್ತಾರೆ. ಒಂದು ವೇಳೆ ಅಂತಹ **Anti Dumping Law** ಅನ್ನು ಇವೊತ್ತು ಕೇಂದ್ರ ಸರ್ಕಾರ ಮಾಡಬೇಕು. ನರಸಿಂಹರಾವ್ ರವರ ಸರ್ಕಾರ ಬಂದ ತಕ್ಷಣ ರೇಷ್ಮೆ ಆಮದು ಮಾಡಿಕೊಳ್ಳುವಂಥದ್ದು ಇವೊತ್ತಿನಿಂದ ಪ್ರಾರಂಭವಾಗಿದೆಯೆಂದು ನಾನು ಹೇಳುವುದಿಲ್ಲ. ಸೆಂಟ್ರಲ್ ಸಿಲ್ಕ್ ಬೋರ್ಡಿನಿಂದ ಪ್ರತಿ ವರ್ಷ ಸ್ವಲ್ಪ ರೇಷ್ಮೆಯನ್ನು ಕೋರಿಯಾ ಮತ್ತು ಚೈನಾ ದೇಶಗಳಿಂದ ಆಮದು ಮಾಡಿಕೊಳ್ಳತಕ್ಕಂಥಾದ್ದು ಇದೆ. ಅದಕ್ಕೆ ಯಾವಾಗಲೂ ಲಿಮಿಟೇಷನ್ ಇರುತ್ತಿತ್ತು. ನಮ್ಮ ಮಾರುಕಟ್ಟೆಯಲ್ಲಿ ನಮ್ಮ ರೈತರು ಸಾಕಷ್ಟು ರೇಷ್ಮೆಯನ್ನು ಕೊಡದಿರುವ ಸಂದರ್ಭದಲ್ಲಿ ಅಥವಾ ಅಲ್ಲಿಗೆ ಬರತಕ್ಕಂಥ, ನೇಯತಕ್ಕಂಥ ಬಟ್ಟೆಗೆ ಒಂದು ಕನಿಷ್ಠ ಗುಣಮಟ್ಟ ಬರಬೇಕೆನ್ನುವ ದೃಷ್ಟಿಯಿಂದ ಹೋರ ರಾಷ್ಟ್ರಗಳಿಂದ ತರಿಸಿಕೊಂಡಿರತಕ್ಕ ಉದಾಹರಣೆಗಳಿವೆ. ಇವೊತ್ತು ಏನು ಮಾಡಿದ್ದಾರೆಂದರೆ, ಇವರು ವಿಶ್ವಬ್ಯಾಂಕಿನ ಒತ್ತಡಕ್ಕೊಳಗಾಗಿ ಸುಮಾರು ೧೫೦-೨೦೦ ಕೋಟಿ ರೂಪಾಯಿಗಳಷ್ಟು ಸಾಮಾನುಗಳನ್ನು ನಮ್ಮ ದೇಶದಿಂದ ಚೈನಾಕ್ಕೆ ಕಳುಹಿಸುವುದು. ಅವು ಖನಿಜ, ಎಣ್ಣೆ ಬೀಜಗಳು, ತಂಬಾಕು ಆಗಿರಬಹುದು. ಅಲ್ಲಿಂದ ರೇಷ್ಮೆ ಎಷ್ಟು ಬೇಕಾದರೂ ತರಿಸಿಕೊಳ್ಳಬಹುದು ಎನ್ನತಕ್ಕಂಥ ಒಂದು ಒಪ್ಪಂದಕ್ಕೆ ಕೇಂದ್ರ ಸರ್ಕಾರ ಸಹಿ ಹಾಕಿದೆ. ಈ ಕಾರಣದಿಂದಾಗಿ ಸಂಪೂರ್ಣವಾಗಿ ರೇಷ್ಮೆ ಬೆಳೆ ಒಂದು ಕಿಲೋಗೆ ೧೮೦೦ ರೂಪಾಯಿಗಳಿದ್ದುದು ಇವೊತ್ತು ೬೦೦-೮೦೦ ರೂಪಾಯಿಗಳಿಗೆ ಇಳಿದಿದೆ. ರೇಷ್ಮೆ ಗೂಡು ಕೆಜಿಗೆ ೨೦೦ ರೂಪಾಯಿಗಳಿದ್ದುದು ಇವೊತ್ತು ೬೦-೮೦ ರೂಪಾಯಿಗಳಿಗೆ ಇಳಿದಿದೆ. ಬಹಳ ಉತ್ತಮವಾದ ರೇಷ್ಮೆ ಗೂಡು ಒಂದು ಕೆಜಿಗೆ ೮೦ ರೂಪಾಯಿಗಳಾಗಿದೆ. ಆದುದರಿಂದ, ರೇಷ್ಮೆ ಬೆಳೆಯತಕ್ಕಂಥ ರೈತರು ದಿಕ್ಕುಗಾಣದ ಪರಿಸ್ಥಿತಿಯಲ್ಲಿದ್ದಾರೆ. ಅವರು ಏನು ಮಾಡಬೇಕೆಂದು ಗೊತ್ತಾಗುತ್ತಿಲ್ಲ. ಈಗ ರೇಷ್ಮೆ ಕಡ್ಡಿಯನ್ನು ಬೇರೆ ಕಡೆಯಿಂದ ತೆಗೆದುಕೊಂಡು ವ್ಯವಸಾಯ

ಮಾಡುವುದಕ್ಕೂ ಸಾಧ್ಯವಿಲ್ಲ. ಸರ್ಕಾರ ಕೊಡತಕ್ಕಂಥ ಗೊಬ್ಬರ ಮತ್ತು ನಮ್ಮ ರಾಜ್ಯದಲ್ಲಿ ಸರಬರಾಜಾಗುತ್ತಿರತಕ್ಕಂಥ ವಿದ್ಯುಚ್ಛಕ್ತಿಯ ಹಿನ್ನೆಲೆಯಲ್ಲಿ ರೇಷ್ಮೆ ವ್ಯವಸಾಯಗಾರರು ತುಂಬಾ ಕಂಗಾಲಾಗಿದ್ದಾರೆ. ಇಂತಹ ಸಂದರ್ಭದಲ್ಲಿ ನಾವೇನು ಮಾಡಬೇಕು ಎನ್ನತಕ್ಕಂಥ ಪ್ರಶ್ನೆ ಎದುರಿಗೆ ಬರುತ್ತದೆ.

೩.೫೫ ಪಿ.ಎಂ.

ನಮ್ಮ ರಾಜ್ಯ ಸರ್ಕಾರದ ನೀತಿ, ನಾವು ವಿಶ್ವಬ್ಯಾಂಕಿನಿಂದ ೧೨೦ ರಿಂದ ೧೫೦ ಕೋಟಿಯವರೆಗೆ ಸಾಲವನ್ನು ತೆಗೆದುಕೊಂಡು ಬಂದಿದ್ದೇವೆ. ಒಂದು ಕಡೆ ಸಾಲವನ್ನು ತೆಗೆದುಕೊಂಡು ಬಂದು ರೇಷ್ಮೆ ಅಭಿವೃದ್ಧಿಯನ್ನು ಮಾಡಬೇಕೆಂದು ಹೇಳಿ ಸಾವಿರಾರು ಜನ ನೌಕರರು ಇರತಕ್ಕ ರೇಷ್ಮೆ ಇಲಾಖೆಯನ್ನು ಇಟ್ಟುಕೊಂಡಿದ್ದೇವೆ. ಇನ್ನೊಂದು ಕಡೆ ರೇಷ್ಮೆ ಬೆಳೆಯತಕ್ಕ ಗೂಡಿನ ಬೆಲೆಯು ೮೦ ರಿಂದ ೬೦ ರೂಪಾಯಿಗಳಿಗೆ ಇಳಿದಾಗ ಅದನ್ನು ಮೇಲೆ ಎತ್ತಲು ಯಾರೂ ಪ್ರಯತ್ನ ಮಾಡತ್ತಿಲ್ಲ. ಇದರಿಂದ ರಾಜ್ಯದ ರೇಷ್ಮೆ ಬೆಳೆಗಾರರಿಗೆ ಬಹಳ ತೊಂದರೆಯಾಗಿದೆ. ಅವರು, ಸಂಪೂರ್ಣವಾಗಿ ನಾಶವಾಗತಕ್ಕ ಸಂದರ್ಭ ಬಂದಿದೆ. ಆ ಕಾರಣಕ್ಕಾಗಿ ಮಾನ್ಯ ಪರಮೇಶ್ವರರವರಿಗೆ ಈ ಸಂದರ್ಭದಲ್ಲಿ ಒಂದು ಒಳ್ಳೆಯ ಮಾತನ್ನು ಹೇಳಬೇಕಾಗುತ್ತದೆ. ಮೊನ್ನೆ ಕೇಂದ್ರದ ರೇಷ್ಮೆ ಮಂತ್ರಿಗಳು ಬೆಂಗಳೂರಿಗೆ ಬಂದಂಥ ಸಂದರ್ಭದಲ್ಲಿ ನಡೆದಂಥ ಸರ್ಕಾರದ ಒಂದು ಸಭೆಯಲ್ಲಿ ಅವರು ಧೈರ್ಯವಾಗಿ ಒಂದು ಮಾತನ್ನು ಹೇಳಿದ್ದಾರೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವರು ಒಬ್ಬ ಕಾಂಗ್ರೆಸ್ ಮಂತ್ರಿಗಳಾಗಿ ಆ ಮಾತನ್ನು ಹೇಳಲಿಲ್ಲ. ಅವರು ನಿಜವಾಗಿಯೂ ರೇಷ್ಮೆ ಬೆಳೆಗಾರರಪರವಾಗಿ, ನೂಲನ್ನು ಬಿಚ್ಚಿ, ಹುರಿಯನ್ನು ಮಾಡತಕ್ಕ ಜನರ ಪರವಾಗಿ ಮಾತನಾಡಿದ್ದಾರೆ, ಅವರ ಮಾತನ್ನು ನಾನು ಮೆಚ್ಚಿಕೊಳ್ಳುತ್ತೇನೆ. ಅವರು ರೇಷ್ಮೆಯನ್ನು ಆಮದು ಮಾಡಿಕೊಳ್ಳತಕ್ಕ ನೀತಿಯನ್ನು ಸಂಪೂರ್ಣವಾಗಿ ನಿಯಂತ್ರಣ ಮಾಡಬೇಕು ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಅವರ ಮಾತಿಗೆ ಇವತ್ತು ಎಷ್ಟು ಬೆಲೆ ಸಿಗುತ್ತದೆಯೋ ನನಗೆ ಗೊತ್ತಿಲ್ಲ, ನಾವು ಇದರ ಬಗ್ಗೆ ದೊಡ್ಡ ಚಳುವಳಿಯನ್ನು ಮಾಡುತ್ತೇವೆ, ಇಲ್ಲದಿದ್ದರೆ ಹಳೇ ಮೈಸೂರು ಭಾಗದಲ್ಲಿರತಕ್ಕ ೫-೬ ಜಿಲ್ಲೆಗಳಲ್ಲಿರುವ ರೇಷ್ಮೆ ಬೆಳೆಗಾರರು ಸಂಪೂರ್ಣವಾಗಿ ನಾಶವಾಗುತ್ತಾರೆ. ಇದನ್ನು ಕೇವಲ ಪ್ರಚಾರಕ್ಕಾಗಿ ವಿಧಾನ ಸಭೆಯಲ್ಲಿ ನಿಲುವಳಿ ಸೂಚನೆಯಾಗಿ ತಂದು ನಾವು ಮಾತನಾಡುತ್ತಿಲ್ಲ. ನಾವು ನಿಜವಾಗಿಯೂ ಸಹಿತ ತೊಂದರೆಗೆ ಒಳಗಾಗಿದ್ದೇವೆ, ವಿಷವನ್ನು ಕುಡಿಯತಕ್ಕ ಸಂದರ್ಭ ಬಂದಿದೆ, ಮಾನ್ಯ ರಾಮಸ್ವಾಮಿಯವರೆ, ನಾನು ಅವಕಾಶ ಬಂದಾಗ ಮಾತನಾಡುತ್ತೇನೆ. ನಿಮಗೆ ಒಂದು ವಾರದಲ್ಲಿ ಒಂದು ಊರಿಗೆ ೬ ಗಂಟೆಗಳ ಕಾಲ ವಿದ್ಯುತ್‌ನ್ನು ಕೊಡಲು ಆಗುತ್ತಿಲ್ಲ, ಫುಲ್ ಬ್ಲೇಜ್‌ನಲ್ಲಿ ಪಂಪುಸೆಟ್ಟೆಗಳು ನಡೆಯುತ್ತಿಲ್ಲ. ವಿಧಾನ ಸಭೆಯು ನಡೆಯುತ್ತಿದ್ದರೆ ಅಲ್ಲಿ ಜನ ನಮ್ಮ ಮೇಲೆ ಶಾಪವನ್ನು ಹಾಕುತ್ತಿದ್ದಾರೆ. ಮತ್ತು ಗೊಬ್ಬರದ ಬೆಲೆ ಹೆಚ್ಚಾಗಿರುವುದು ತಮಗೆಲ್ಲರಿಗೂ ಗೊತ್ತಿದೆ. ಇಷ್ಟೆಲ್ಲಾ ಬೆಳೆದ ಮೇಲೂ ೧೫೦ ರೂ.ಗಳನ್ನು ಖರ್ಚು ಮಾಡಿ ಒಂದು ಕೆ.ಜಿ. ಗೂಡನ್ನು ತಂದು ನೀವು ೬೦ ರೂ.ಗೆ ಕೊಡು ಎಂದು ಕೇಳಿದರೆ ಪಾಪ ರೈತ ಏನು ಮಾಡಬೇಕು? ದಯಮಾಡಿ ಇದರ ಬಗ್ಗೆ ಹೇಳಿ? ಅವರು ಏನು ಉದ್ಯೋಗವನ್ನು ಮಾಡಲು ಸಾಧ್ಯವಾಗುತ್ತದೆ? ಮಾನ್ಯ ಅಧ್ಯಕ್ಷರೆ, ನಾನು ಸರ್ಕಾರಕ್ಕೆ ಸಲಹೆ ಮಾಡತಕ್ಕಂಥದ್ದು ಏನೆಂದರೆ, ಮಾನ್ಯ ವೈ.ಕೆ. ರಾಮಯ್ಯನವರು ಹೇಳಿದ್ದಂತೆ ಒಂದು ನಿಯೋಗವನ್ನು ತೆಗೆದು ಕೊಂಡು ಹೋಗಿ ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ತರೋಣ, ಸರ್ಕಾರದವರು ಮಾಡಲಿಲ್ಲವೆಂದರೆ ನಾವು ಮಾಡುತ್ತೇವೆ. ನೀವು ನಿಯೋಗವನ್ನು ತೆಗೆದುಕೊಂಡು ಹೋಗದಿದ್ದರೆ ನಾವು ನಿಯೋಗವನ್ನು ದೆಹಲಿಗೆ ತೆಗೆದುಕೊಂಡು ಹೋಗಿ ಪ್ರಧಾನ ಮಂತ್ರಿಗಳಿಗೆ, ಕೇಂದ್ರದ ಅರ್ಥ ಮಂತ್ರಿಗಳಿಗೆ , ಕಾಮರ್ಸ್ ಮಂತ್ರಿಗಳಿಗೆ, ಟೆಕ್ಸ್‌ಟೈಲ್ ಮಂತ್ರಿಗಳಿಗೆ ಘೇರಾವ್ ಮಾಡುತ್ತೇವೆ ಇದನ್ನು ಬಿಡಲಾಗುವುದಿಲ್ಲ. ನಮಗೆ ಎಷ್ಟು ಹೊಟ್ಟೆ ಉರಿಯುತ್ತದೆಂದರೆ ಕಳೆದ

೨೦-೩೦ ವರ್ಷಗಳಿಂದ ಇಷ್ಟೊಂದು ಅನ್ಯಾಯ ಎಂದೂ ರೇಷ್ಮೆ ಬೆಳೆಗಾರರಿಗೆ ಆಗಿರಲಿಲ್ಲ, ಅಂಥ ಅನ್ಯಾಯವಾಗಿದೆ. ಮಾನ್ಯ ವೈ.ಕೆ. ರಾಮಯ್ಯನವರ ರೇಷ್ಮೆ ಬೆಳೆಗೆಬರತಕ್ಕ ರೋಗದ ಬಗ್ಗೆ ಬಹಳ ದೀರ್ಘವಾಗಿ ಮಾತನಾಡಿದ್ದಾರೆ, ಅದೊಂದು ದೊಡ್ಡ ದುರಂತ. ಕೆಳಮಟ್ಟದಲ್ಲಿರತಕ್ಕ ಕೆಲವು ಅಧಿಕಾರಿಗಳು ಅದನ್ನು ಸಂಪೂರ್ಣವಾಗಿ ನಾಶ ಮಾಡತಕ್ಕ ಮಟ್ಟಕ್ಕೆ ತೆಗೆದುಕೊಂಡು ಹೋಗಿದ್ದಾರೆ, ಆದರೆ ಅದೃಷ್ಟವಶಾತ್ ಆ ವಿಷಯದ ಬಗ್ಗೆ ವಿಧಾನ ಸಭೆಯಲ್ಲಿ ಪ್ರತಿಭಟನೆಯಾದಮೇಲೆ ಅದು ಸ್ವಲ್ಪ ನಿಯಂತ್ರಣಕ್ಕೆ ಬರುವ ಮಟ್ಟಿಗೆ ಇದೆ. ಆದರೆ ಅದು ಏನೇನು ಸಾಕಾಗುವುದಿಲ್ಲ. ಆದುದರಿಂದ ಇದರ ಬಗ್ಗೆ ನಾವು ಹೋರಾಟವನ್ನು ನಡೆಸಿಕೊಂಡು ಹೋಗಬೇಕಾಗುತ್ತದೆ. ಇದರಲ್ಲಿ ಪಕ್ಷದ ಪ್ರಶ್ನೆಯೇ ಇಲ್ಲ. ಕಾಂಗ್ರೆಸ್, ಜನತಾದಳ, ಜನತಾಪಕ್ಷ ಎನ್ನತಕ್ಕದ್ದು ಇಲ್ಲ. ಇದು ನಮ್ಮ ಅಳಿವು ಉಳಿವಿನ ಪ್ರಶ್ನೆ. ಆದುದರಿಂದ ಸರ್ಕಾರದವರು ಒಂದು ನಿಯೋಗವನ್ನು ಕೇಂದ್ರಸರ್ಕಾರಕ್ಕೆ ತೆಗೆದುಕೊಂಡು ಹೋಗಿ ಸಂಬಂಧಪಟ್ಟ ಮಂತ್ರಿಗಳ ಮೇಲೆ ಒತ್ತಾಯವನ್ನು ತರೋಣ, ನಮ್ಮ ರಾಜ್ಯದ ರೇಷ್ಮೆ ಬೆಳೆಯತಕ್ಕ ಪ್ರತಿನಿಧಿಗಳಾಗಿ ಹೋಗಿರತಕ್ಕ ಲೋಕಸಭೆಯ ಸದಸ್ಯರುಗಳು ಸಹಿತ ಇದರ ಬಗ್ಗೆ ಚಕಾರವೆತ್ತಲಿಲ್ಲ, ಅವರು ಚಕಾರವೆತ್ತದೇ ಇರತಕ್ಕದು ನಿಜವಾಗಿಯೂ ಕೂಡ ದುರದೃಷ್ಟದ ವಿಚಾರ ಕೇಂದ್ರದ ಮುಂದೆ ಅವರುಗಳು ಪ್ರತಿಭಟನೆ ಮಾಡಬೇಕಾಗಿತ್ತು, ಲೋಕಸಭೆಯಲ್ಲಿ ನಮ್ಮರಾಜ್ಯದ ಸದಸ್ಯರುಗಳು ಇದರ ಬಗ್ಗೆ ಉಸಿರು ಎತ್ತಿಲ್ಲ. ಇದರ ಬಗ್ಗೆ ಏಕೆ ಅವರುಗಳು ಮಾತನಾಡುತ್ತಿಲ್ಲವೊ ನನಗಂತೂ ಗೊತ್ತಿಲ್ಲ, ನನಗೆ ಅರ್ಥವಾಗುತ್ತಿಲ್ಲ. ಆದುದರಿಂದ ನಾನಾದರೂ ತತ್ಕಾಲಿಕವಾಗಿ ರಾಜ್ಯಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡಬಯಸುತ್ತೇನೆ. ನಿಯೋಗವನ್ನು ಕೇಂದ್ರ ಸರ್ಕಾರಕ್ಕೆ ತೆಗೆದುಕೊಂಡು ಹೋಗುವುದು ಒಂದನೆಯದು, ಎರಡನೆಯದಾಗಿ ನಮಗೆ ಹೊರ ದೇಶಗಳಿಂದ ಬರತಕ್ಕಂಥ ರೇಷ್ಮೆ ಏನು ಇದೆ ಅದರ ಮೇಲೆ ನಿಯಂತ್ರಣ ತರಬೇಕು, ಅದನ್ನು ಮಾಡಬೇಕಾದರೆ ಅದರ ಮೇಲೆ ಪ್ರವೇಶ ತೆರಿಗೆಯನ್ನು ಹಾಕಬೇಕು. ಆಗ ಇದು ರೆಗ್ಯುಲೇಟ್ ಆಗುತ್ತದೆ. ನಾವು ಪ್ರವೇಶತೆರಿಗೆಯನ್ನು ಹೊರ ದೇಶದ ರೇಷ್ಮೆಯ ಮೇಲೆ ಹಾಕಿದರೆ ಮಾತ್ರ ರೇಷ್ಮೆಯನ್ನು ಬೆಳೆಯತಕ್ಕ ರೈತರು ಸರಿಯಾಗಿ ಬೆಳೆದು ಅವರ ಬೆಳೆಗೆ ಸರಿಯಾದ ಬೆಲೆ ಸಿಗುವಲ್ಲಿ ಅನುಕೂಲವಾಗುತ್ತದೆ. ನಾನು ಪ್ರಾರಂಭದಲ್ಲೆ ದೇಶದಲ್ಲಿ ಬೆಳೆಯತಕ್ಕ ರೇಷ್ಮೆಯಲ್ಲಿ ಸುಮಾರು ೬೦ ರಷ್ಟು ರೇಷ್ಮೆಯನ್ನು ನಮ್ಮ ಕರ್ನಾಟಕ ರಾಜ್ಯ ಒಂದರಲ್ಲೇ ಬೆಳೆಯುತ್ತಾರೆಂದು ಹೇಳಿದೆ. ಆ ಕಾರಣಕ್ಕಾಗಿ ವಿದೇಶದಿಂದ ಆಮದು ಮಾಡಿಕೊಳ್ಳುವ ರೇಷ್ಮೆಯ ಮೇಲೆ ಪ್ರವೇಶತೆರಿಗೆಯನ್ನು ಹಾಕಬೇಕು. ಮತ್ತೊಂದು ವಿಚಾರವೇನೆಂದರೆ, ಕೇಂದ್ರ ರೇಷ್ಮೆ ಮಂಡಳಿಯಲ್ಲಿ ಏನು ಮಾಡುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ಬೇರೆ ದೇಶದಿಂದ ಬರುವ ರೇಷ್ಮೆಯಮೇಲೆ ನಿಯಂತ್ರಣ ಮಾಡಬೇಕು ಈಗ ನಿಯಂತ್ರಣ ಇರದಿದ್ದರೆ ಕೇಂದ್ರ ರೇಷ್ಮೆ ಮಂಡಳಿಯನ್ನೇ ಮುಚ್ಚತಕ್ಕ ವ್ಯವಸ್ಥೆಯನ್ನು ಮಾಡಿ. ಅದು ಈಗ ಒಂದು ವ್ಯಾಪಾರಕೇಂದ್ರವಾಗಿ ಕಂಡುಬರುತ್ತಿದೆ, ಯಾರುಯಾರು ಹೊರಗಡೆಯಿಂದ ರೇಷ್ಮೆಯನ್ನು ತರುತ್ತಾರೆ ಅವರಿಂದ ಕಮಿಷನನ್ನು ತೆಗೆದುಕೊಂಡು ನೀವು ಎಷ್ಟು ಬೇಕಾದರೂ ತೆಗೆದುಕೊಂಡು ಬನ್ನಿ ಎಂದು ಅವರಿಗೆ ಹೇಳುವ ಮಟ್ಟಿಗೆ ಕೇಂದ್ರವನ್ನು ತೆಗೆದುಕೊಂಡು ಹೋಗಿದ್ದಾರೆ. ಇದರಿಂದ ಕೆಲವರಿಗೆ, ಕೆಲವು ವ್ಯಾಪಾರಸ್ಥರಿಗೆ ಅನುಕೂಲವಾಗುತ್ತದೆ. ಕಡಿಮೆ ಬೆಲೆಯಲ್ಲಿ ಬಟ್ಟೆ ಮಾಡಿ ಹೆಚ್ಚಿನ ಬೆಲೆಯಲ್ಲಿ ಮಾರಬಹುದು ಅಂತಹ ಅನುಕೂಲ ಆಗಿದೆ. ಆದರೆ, ನೇಕಾರರಿಗೆ ಆಗಿಲ್ಲ. ಈ ಕಾರಣದಿಂದ ರೇಷ್ಮೆ ವ್ಯವಸಾಯ ಕರ್ನಾಟಕದಲ್ಲಿ ನಾಶವಾಗತಕ್ಕಂತಹ ಅಂಚಿಗೆ ಹೋಗಿದೆ ಅದನ್ನು ತಪ್ಪಿಸಲಿಕ್ಕೆ ಸರಕಾರ ಪ್ರಯತ್ನ ಮಾಡಬೇಕು. ಈ ಉದ್ಯಮದ ಬಗ್ಗೆ ಬಹಳಷ್ಟು ವಿಷಯಗಳನ್ನು ಹೇಳುವುದು ಇದೆ. ನಿಮ್ಮ ಮನವೊಲಿಸುವುದಕ್ಕೆ ಈ ೨-೩ ಅಂಶಗಳನ್ನು ಮಾತ್ರ ಗಮನಕ್ಕೆ ತಂದಿದ್ದೇನೆ. ನಾವು ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಬೈರೇಗೌಡರು ರೇಷ್ಮೆ ನೆಲದಿಂದ ನಾನು ಬಂದಿದ್ದೇನೆಂದು ಹೇಳಿದರು. ಅವರಷ್ಟೇ ನಾನೂ ಅಧಿಕಾರಯುತವಾಗಿ ರೇಷ್ಮೆ ಭೂಮಿಯಿಂದ ಬಂದಿರತಕ್ಕಂಥ ಮನುಷ್ಯ. ನನ್ನ ಪಕ್ಕದಲ್ಲಿ ಕುಳಿತಿರತಕ್ಕಂಥಹ ಮಹದೇವ್‌ರವರೂ ರೇಷ್ಮೆ ಭೂಮಿಯಿಂದ ಬಂದಿರತಕ್ಕಂತಹವರು ಅಲ್ಲಿ ಎಲ್ಲಾ ಬೇಸತ್ತು ನನ್ನ ಕಡೆ ಬಂದು ಕುಳಿತಿದ್ದಾರೆ ಬಹಳ ನೊಂದು ನಮ್ಮ ರೇಷ್ಮೆ ಬೆಳೆ ನಷ್ಟವಾಯಿತು ನಮ್ಮ ಪಕ್ಷದ ಸದಸ್ಯರಿಂದ ಉದ್ಧಾರವಾಗುವುದಿಲ್ಲವೆಂದು ಇಲ್ಲಿಗೆ ಬಂದಿದ್ದಾರೆ. ಇಲ್ಲಿ ಸಮಾಧಾನದಿಂದ ಇರಲೀ ಎಂದು ನಾನು ಕೂರಿಸಿಕೊಂಡಿದ್ದೇನೆ. ಬಹಳ ಸಾರಿ ಮಂತ್ರಿಮಂಡಲವನ್ನು ಬದಲಾವಣೆ ಮಾಡುವುದರಲ್ಲಿ ಅಗ್ರಗಣ್ಯರಾಗಿ ಕೆಲಸಮಾಡಿ, ಕೊನಗೇನೂ ಸಿಗದೆ ಇಲ್ಲಿ ಬಂದು ಕುಳಿತಿದ್ದಾರೆ, ನನಗೆ ಅವರ ಚಿಂತಾಜನಕ ಪರಿಸ್ಥಿತಿ ನೋಡಿ ಬಹಳ ಬೇಸರವಾಯಿತು. ನೀವು ಸರಿಪಡಿಸುವುದಾದರೆ ಅದನ್ನು ಸರಿಪಡಿಸಿ ನಿಮ್ಮ ಕೈಲಾಗದಿದ್ದರೆ ನಾವೇ ಸರಿಪಡಿಸುತ್ತೇವೆ ಮಹದೇವ ರವರ ಬಗ್ಗೆ ಬಹಳ ನಂಬಿಕೆ ಇದೆ, ಅವರು ಎಲ್ಲಿದ್ದರೂ ಪ್ರಾಮಾಣಿಕವಾಗಿರುವಂತಹ ವ್ಯಕ್ತಿ.

ಶ್ರೀ ಸಿ. ಬೈರೇಗೌಡ:- ನಿನ್ನೆ ದಿವಸ ಅಶೋಕ ಹೋಟೆಲ್‌ನಲ್ಲಿ ದೊಡ್ಡ ಸಭೆನಡೆಯಿತು ಆದರಲ್ಲಿ ಮಹದೇವ್‌ರವರೂ ಇದ್ದರೆಂದು ಸುದ್ದಿ. ಅಲ್ಲಿಗೆ ಹೋದಂಥ ಸ್ನೇಹಿತರನ್ನು ಯಾರ್‍ಯಾರು ಆ ಸಭೆಗೆ ಬಂದಿದ್ದರು, ಎಂದು ಕೇಳಿದ್ದಕ್ಕೆ ಮಹದೇವ್‌ರವರೂ ಬಂದಿದ್ದರು ಎಂದು ಹೇಳಿದರು. ಈ ಸರಕಾರವನ್ನೂ ಬದಲಾಯಿಸುವುದಕ್ಕೇನಾದರೂ ಕೈ ಹಾಕಿದ್ದಾರೆಯೇ ಮಹದೇವ್‌ರವರು.......

ಶ್ರೀ ಪಿ.ಜಿ.ಆರ್. ಸಿಂಧ್ಯ:- ಯಾವುದಾದರೂ ನಿಗಮದ ಅಧ್ಯಕ್ಷರಾಗಬೇಕೆಂದು ಅವರು ಇದ್ದರೆ, ಅದನ್ನು ಹಾಳು ಮಾಡುವುದಕ್ಕೆ ಬೈರೇಗೌಡರು ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಮಹದೇವ್‌ರವರು ನಮಗೂ ನಿಮಗೂ ಗೊತ್ತು. ಎಲ್ಲರನ್ನು ಅವರು ನಂಬುತ್ತಾರೆ. ಆದರೆ ಅವರಿಗೆ ಮೋಸವಂತೂ ಆಗಿದೆ. ಆ ವಿಚಾರವಲ್ಲಿ ವಿರೋಧ ಪಕ್ಷದ ಸದಸ್ಯರುಗಳಾದ ನಾವು ಕೂಡ ಧ್ವನಿಗೂಡಿಸುತ್ತೇವೆ. . ಮತ್ತೊಬ್ಬರು ಮಂತ್ರಿಯನ್ನು ತಾವು ಮಾಡುವುದಾದರೆ ಅವರನ್ನು ಮಾಡಿ ನಮ್ಮದೇನೂ ತಕರಾರಿಲ್ಲ. ಹಗಲೂ ರಾತ್ರಿ ಈ ಸಭೆಯಲ್ಲಿ ನಿಷ್ಪಕ್ಷಪಾತವಾಗಿ ಕೆಲಸ ಮಾಡಿದ್ದಾರೆ, ಇವತ್ತು ಮಹಾ ಮೌನಿಯಾಗಿ ಇದ್ದಾರೆ. ಅವರ ಪರಿಸ್ಥಿತಿ ಚಿಂತಾಜನಕವಾಗಿದೆಯೆಂದು ನಮಗನಿಸುತ್ತದೆ. ಒಂದು ಕಾಲದಲ್ಲಿ ಕರ್ನಾಟಕ ರಾಜ್ಯ ವಿಶ್ವದ ಭೂಪಟದಲ್ಲಿ ರೇಷ್ಮೆ ಉದ್ಯಮ ಅತ್ಯಂತ ಉನ್ನತ ಸ್ಥಾನವನ್ನು ಪಡೆದಿತ್ತು. ಪ್ರಪಂಚದ ಭೂಪಟದಲ್ಲಿ ಕರ್ನಾಟಕ ರಾಜ್ಯ ರೇಷ್ಮೆ ಉದ್ಯಮದಲ್ಲಿ ಉನ್ನತವಾದ ಸ್ಥಾನವನ್ನು ಪಡೆದಿತ್ತೋ ಆ ಸ್ಥಾನ ಇವತ್ತು ನೆಲ ಕಚ್ಚಿದೆ ಎಂದು ಅತ್ಯಂತ ದುರ್ದೈವದಿಂದ ಹೇಳಬೇಕಾಗಿದೆ. ರೇಷ್ಮೆ ಉದ್ಯಮದ ಪರಿಸ್ಥಿತಿಯನ್ನು ಸರಕಾರ ಅರಿತುಕೊಳ್ಳದಿದ್ದರೆ ರಾಜ್ಯ ಮತ್ತು ಕೇಂದ್ರ ಸರಕಾರ ಎರಡೂ ಅರಿತುಕೊಳ್ಳದಿದ್ದರೆ ಈ ರೇಷ್ಮೆ ಉದ್ಯಮ ಕರ್ನಾಟಕದಲ್ಲಿ ನಾಶವಾಗುವುದರಲ್ಲಿ ಅನುಮಾನವೇ ಇಲ್ಲ. ಮಾನ್ಯ ಸಿಂಧ್ಯರವರು ಮಾತನಾಡುತ್ತಾ ಹೇಳಿದರು, ನಮ್ಮ ಲೋಕಸಭಾ ಸದಸ್ಯರುಗಳು ಏನು ಮಾಡುತ್ತಿದ್ದಾರೆಂದು ನಾನು ಬಹಳ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ನಮ್ಮ ಲೋಕಸಭಾ ಸದಸ್ಯರುಗಳನ್ನು ನಾನು ಈ ಸದನದಲ್ಲಿ ಟೀಕೆ ಮಾಡತಕ್ಕಂತಹ ಗೋಜಿಗೆ ಹೋಗತಕ್ಕಂಥವನು ಅಲ್ಲ. ನಮ್ಮ ರೇಷ್ಮೆ ಉದ್ಯಮಕ್ಕೆ ಇಷ್ಟೊಂದು ಅಪಾಯ ಒದಗಿರುವಾಗ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ಬಗೆಹರಿಸುವುದರಲ್ಲಿ ಕೇಂದ್ರ ಸರಕಾರದ ಮೇಲೆ ಒತ್ತಡ ತರುವುದರಲ್ಲಿ ಕೇಂದ್ರ ಸರಕಾರದ ಗಮನವನ್ನು ಸೆಳೆಯುವುದರಲ್ಲಿ ನಮ್ಮ ಪಾರ್ಲಿಮೆಂಟ್ ಸದಸ್ಯರು, ನಮ್ಮ ಕರ್ನಾಟಕ ರಾಜ್ಯದಿಂದ ಹೋಗಿರತಕ್ಕಂತಹ ಕೇಂದ್ರದ ಮಂತ್ರಿಗಳು ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಅದರಲ್ಲಿ ಎರಡನೆಯ ಅಭಿಪ್ರಾಯ ಇಲ್ಲವೇ ಇಲ್ಲ.

ಈ ಉದ್ಯಮದಿಂದ ೩೫ ಲಕ್ಷ ಜನರು ಜೀವನ ಮಾಡುತ್ತಿದ್ದಾರೆಂದು ಹೇಳಿದರು. ೫ಲಕ್ಷ, ೧೦ ಲಕ್ಷ ಜನ ಎಂದು ಹೇಳಿದರು. ನನ್ನ ಅಂದಾಜಿನಲ್ಲಿ ೧ ಕೋಟಿ ಜನ ಕರ್ನಾಟಕದಲ್ಲಿ ರೇಷ್ಮೆ ಉದ್ಯಮದಲ್ಲಿದ್ದಾರೆ. ಈ ರೇಷ್ಮೆ ಉದ್ಯಮ ಎಂದರೆ ರೇಷ್ಮೆಬಟ್ಟೆ ಹೊರಗಡೆ ಬಂದು ಅದನ್ನು ಹೊಲಿದು ಉಡುಪನ್ನು ಮಾಡಿ ಹಾಕಿಕೊಂಡಾಗ ಬಹಳ ಸೊಗಸಾಗಿ ಕಾಣುತ್ತದೆ. ರೇಷ್ಮೆ ಪ್ರಾರಂಭದಿಂದ ಈ ಹಂತವನ್ನು ತಲುಪಬೇಕಾದರೆ ಎಷ್ಟು ಜನರು ಬೆವರು ಸುರಿಸಬೇಕು, ಎಷ್ಟೊಂದು ಜನರ ಕಾರ್ಯತಂತ್ರವಾಗಬೇಕು, ಎಷ್ಟೊಂದು ಜನರು ಇದಕ್ಕಾಗಿ ದುಡಿಯಬೇಕೆಂಬುದನ್ನು ಮೂಲ ಭೂತವಾಗಿ ಯೋಚನೆ ಮಾಡಬೇಕಾಗಿದೆ. ಇಂಥ ನಾನಾ ಮುಖದ ಅಂಗಗಳಲ್ಲಿ ಸುಮಾರು ೧ ಕೋಟಿ ಜನರು ಬದುಕುತ್ತಿದ್ದಾರೆ. ಒಂದು ಕಾಲದಲ್ಲಿ ರೇಷ್ಮೆ ಬೆಳೆಗಾರರು ತಮ್ಮ ಶ್ರೀಮಂತಿಕೆಯನ್ನು ಪ್ರದರ್ಶಿಸಿ ತಮ್ಮ ಕೈಯಿಂದ ಜನರಿಗೆ, ಸಾರ್ವಜನಿಕರಿಗೆ, ಬಡವರಿಗೆ ತೊಂದರೆಯಾದವರಿಗೆ ಯಥೇಚ್ಛವಾಗಿ ದಾನವನ್ನು ಕೊಡುತ್ತಿದ್ದರು. ಇವತ್ತು ಅದೇ ರೇಷ್ಮೆ ಬೆಳೆಗಾರರು ಬೀದಿ ಭಿಕ್ಷುಕರಾಗಬೇಕಾದ ಪರಿಸ್ಥಿತಿ ಬಂದಿದೆ. ಈ ಉದ್ಯಮದಲ್ಲಿ ಎಷ್ಟೊಂದು ಜನರು ಬರುತ್ತಾರೆಂದು ತಮಗೆ ಹೇಳಬಯಸುತ್ತೇನೆ. ಪ್ರಾರಂಭದಲ್ಲಿ ಹಿಪ್ಪನೇರಳೆ ಬೆಳೆಯನ್ನು ಬೆಳೆಸುವಂಥ ವ್ಯಕ್ತಿಗಳು, ಬೆಳೆದಮೇಲೆ ಸೊಪ್ಪನ್ನು ಬಿಡಿಸುವ ವ್ಯಕ್ತಿಗಳು, ಮೊಟ್ಟೆಯನ್ನು ಮಾಡುವವರು ಮರಿಯನ್ನು ಹೊರಗೆ ತರುವವರು. ಹುಳುವನ್ನು ಮೇಯಿಸುವವರು, ಹುಳುವನ್ನು ಚಂದ್ರಿಕೆಗೆ ಬಿಡುವವರು, ಚಂದ್ರಿಕೆಯಿಂದ ಗೂಡನ್ನು ಬಿಡಿಸುವವರು, ನೂಲನ್ನುಮಾಡುವವರು, ನೂಲಿನಿಂದ ಬಟ್ಟೆಯನ್ನು ಮಾಡುವವರು ಬಟ್ಟೆ ನೇಯುವ ನೇಕಾರರು ಗೂಡನ್ನು ತೆಗೆದುಕೊಂಡು ಹೋಗುವವರು ಕಳವೆಗೂಡನ್ನು ಮಾರುವವರು, ನಟ್ಟೆಯನ್ನು ಮಾರುವವರು, ರೇಷ್ಮೆ ಗೂಡನ್ನು ಮಾರುವವರು, ಮಾರುಕಟ್ಟೆಗೆ ತರುವವರು, ರೇಷ್ಮೆ ಬಟ್ಟೆ ತಯಾರಕರು, ಅದನ್ನು ಮಾರುವವರು, ಇವೆಲ್ಲಾ ಒಂದಕ್ಕೊಂದು ಸೇರಿದರೆ ಕನಿಷ್ಠ ೧ ಕೋಟಿ ಜನರು ಈ ಉದ್ಯಮದಿಂದ ಬದುಕುತ್ತಿದ್ದಾರೆ. ಈ ಉದ್ಯಮ ಕೇವಲ ಮೈಸೂರು ಜಿಲ್ಲೆ, ಕೋಲಾರ ಜಿಲ್ಲೆಗೆ ಮಾತ್ರ ಸೀಮಿತವಾಗಿಲ್ಲ. ಇದು ಸಮಗ್ರ ಕರ್ನಾಟಕದ ವ್ಯವಸಾಯಗಾರರಿಗೆ ವಿಶಿಷ್ಟವಾದ ಸ್ಥಾನವಿದೆ. ಇದು ನಮ್ಮ ಕರ್ನಾಟಕದಲ್ಲಿ ಗೃಹಕೈಗಾರಿಕೆಯಾಗಿದೆ. ಇದು ಯಾರನ್ನೂ ನಂಬಿಕೊಂಡಿಲ್ಲ. ಸರ್ಕಾರಕ್ಕೆ ಬಾಚುತ್ತಿಲ್ಲ. ತಾವೇ ಸ್ವತಃ ತಮ್ಮ ಕೈಗಾರಿಕೆಮೂಲಕ, ಕರಕುಶಲತೆಯಿಂದ ಹಣವನ್ನುಸಂಪಾದನೆ ಮಾಡಿ, ಜೀವನ ಸಾಗಿಸುವಂಥ ೧ ಕೋಟಿ ಜನರ ಹೊರೆ ಈ ಸರ್ಕಾರಕ್ಕಿಲ್ಲ. ಇಂಥ ಪರಿಸ್ಥಿತಿಯಲ್ಲಿ ರೇಷ್ಮೆ ಉದ್ಯಮಕ್ಕೆ ಇವತ್ತು ಒದಗಿರತಕ್ಕ ರೋಗ ಅಸಾಧಾರಣವಾದುದು. ಇವತ್ತು ತಗುಲಿರತಕ್ಕ ರೋಗ ಒಂದು ಕ್ಯಾನ್ಸರ್. ಈ ರೋಗವನ್ನು ನಿರ್ಮೂಲ ಮಾಡಬೇಕಾದರೆ, ಸರ್ಕಾರ ಪರಿಣಾಮಕಾರಿಯಾಗಿ ಕ್ರಮ ಕೈಗೊಳ್ಳದಿದ್ದರೆ ನಮ್ಮ ಕಣ್ಣೆದುರಿಗೇ ರೇಷ್ಮೆ ಉದ್ದಿಮೆವಿನಾಶದ ಅಂಚಿಗೆ ಹೋಗುತ್ತದೆ. ಆಮದು ನೀತಿಯನ್ನು ಏತಕ್ಕೆ ಬಂದ್ ಮಾಡಬಾರದು? ಬೇರೆಕಡೆಯಿಂದತರತಕ್ಕ ರೇಷ್ಮೆಯನ್ನು ತಕ್ಷಣದಿಂದ ನಿಲ್ಲಿಸಿದ್ದೇವೆಂದರೆ ನಮಗಾಗುವ ನಷ್ಟವೇನು? ನಮ್ಮಲ್ಲಿ ಈ ರೇಷ್ಮೆ ಉದ್ದಿಮೆ ಪರಿಸ್ಥಿತಿಗೆ ಬಂದಿರುವುದನ್ನು ನೋಡಿದರೆ..........

ಶ್ರೀ ಸಿ. ಬೈರೇಗೌಡ:- ನಮ್ಮ ಮಾಜಿ ರೇಷ್ಮೆ ಸಚಿವರಿಗೆ ಈಗ ಗೊತ್ತಾಗಿದೆ. ಇಲ್ಲಿ ರೇಷ್ಮೆ ಬಗ್ಗೆ ಏನೋ ನಡೆಯುತ್ತಿದೆ ಎಂದು. ಅವರೂ ಕೂಡ ರೇಷ್ಮೆ ಬೆಳೆಗಾರರು. ಅಂದರೆ ಅವರಿಗೆ ಎಷ್ಟುಮಟ್ಟಿಗೆ ಶ್ರದ್ಧೆ ಇದೆ ಎಂಬುದು ತೋರಿಸುತ್ತದೆ.

ಶ್ರೀ ಎಸ್. ಮುನಿಯಪ್ಪ:- ಇದ್ದಕ್ಕಿದ್ದಂತೆ ಇಂಥ ಮಹತ್ವದ ವಿಚಾರವನ್ನು ಇವತ್ತೇ ತೆಗೆದುಕೊಂಡು ಇವತ್ತೆ ಚರ್ಚೆಮಾಡುತ್ತಾರೆಂದು ನಮಗೆ ಕನಸು ಬಿದ್ದಿರಲಿಲ್ಲ.

ಶ್ರೀ ಎ. ಕೃಷ್ಣಪ್ಪ:- ನಾವು ಸ್ವತಃ ತೋಟಗಾರರಾಗಿರುವುದರಿಂದ ನಮಗೆ ಹೆಚ್ಚಿನ ಕಾಳಜಿ ಇರುತ್ತದೆ. ಅದಕ್ಕೆ ಬೇಕಾದಂಥ ವ್ಯವಸ್ಥೆ ಮಾಡಲು ಕೇಂದ್ರ ಸರ್ಕಾರಕ್ಕೆ ಒತ್ತಾಯ ತಂದಿದ್ದೇವೆ.

ಶ್ರೀವಾಟಾಳ್ ನಾಗರಾಜ್:- ಅದಕ್ಕಾಗಿ ಒಂದು ಇಲಾಖೆ ಬೇಕೆ. ರೇಷ್ಮೆ ಇಲಾಖೆಯನ್ನು ಮುಚ್ಚುತ್ತಿದ್ದಾರೆ. ರೇಷ್ಮೆ ನೇಕಾರರು ಬೀದಿಪಾಲಾಗಿದ್ದಾರೆ. ರೇಷ್ಮೆ ಬೆಳೆ ನಾಶವಾಗುತ್ತಿದೆ. ಇದಕ್ಕೆ ಒಂದು ಇಲಾಖೆ ಬೇಕೆ? ಯಾವ ಉದ್ದೇಶಕ್ಕಾಗಿ ಇದಕ್ಕೆ ಒಂದು ಇಲಾಖೆ ಬೇಕು? ಇಲಾಖೆ ಸಮರ್ಥವಾಗಿ ನಡೆಯಬೇಕಾದರೆ ಸರ್ಕಾರ ಒಂದು ಹೊಸ ನೀತಿಯನ್ನು ಅನುಸರಿಸಬೇಕು. ಸರ್ಕಾರಕ್ಕೆ ಚೈತನ್ಯಪೂರ್ಣವಾದಂಥ ಶಕ್ತಿಯನ್ನು ಈ ಇಲಾಖೆ ಕೊಡಬೇಕು. ಈ ಇಲಾಖೆ ಬರೀಬರಡಾಗಿ, ಅದಕ್ಕೆ ಒಬ್ಬ ಮಂತ್ರಿ ಇದ್ದಾರೆಂದರೆ ಅವರುತಾನೇ ಏನು ಕೆಲಸ ಮಾಡುವುದಕ್ಕಾಗುತ್ತದೆ ?

ಒಬ್ಬ ಮಾನ್ಯ ಸದಸ್ಯರು:- ಈ ಇಲಾಖೆ ಬಹಳ ಮಹತ್ವವಾದುದೆಂದು ಹೇಳುತ್ತೀರಿ. ರೇಷ್ಮೆ ಕೈಗಾರಿಕೆ ಬಹಳ ಮಹತ್ವವಾದುದೆಂದು ಹೇಳುತ್ತೀರಿ, ಮತ್ತೆ ಇದಕ್ಕೆ ಒಂಮ ಇಲಾಖೆ ಬೇಕೆ ಎಂದು ಕೇಳುತ್ತಿದ್ದೀರಲ್ಲ?

ಶ್ರೀ ವಾಟಾಳ್ ನಾಗರಾಜ್:- ಈ ಇಲಾಖೆ ಬಹಳ ಮಹತ್ವವಾದುದೇನೋ ನಿಜ. ಕೈಕಾಲು ತಲೆ ಯಾವುದು ಇಲ್ಲವಾದಮೇಲೆ ಈ ಇಲಾಖೆ ಏತಕ್ಕೆ ಬೇಕು. ಅದಲ್ಲದೆ ಮಾನ್ಯ ಅಧ್ಯಕ್ಷರೇ ಒಂದು ಕಾಲದಲ್ಲಿ ಇತ್ತು ಮೈಸೂರು ಗಂಧ ಈಗ ನಮ್ಮಲ್ಲಿ ಇಲ್ಲ. ಮೈಸೂರು ರೇಷ್ಮೆ ಪ್ರಸಿದ್ಧಿ ಕೋಲಾರದ ಚಿನ್ನದ ಗಣಿ ಮುಚ್ಚುವ ಸ್ಥಿತಿ ಬಂದಿದೆ. ನಮ್ಮ ಇತಿಹಾಸಕ್ಕೆ ಒಂದು ಅಪಚಾರ ಇವತ್ತು ಒದಗಿ ಬಂದಿದೆ. ಅದರಲ್ಲೇನು ಎರಡು ಅಭಿಪ್ರಾಯವಿಲ್ಲ.

ಒಬ್ಬ ಮಾನ್ಯ ಸದಸ್ಯರು:- ಮೈಸೂರು ಪಾಕ್ ಇದೆ.

ಶ್ರೀ ವಾಟಾಳ್ ನಾಗರಾಜ್:- ಆಗಬಹುದು, ಆಗಬಹುದು, ಇವು ಮೂರನ್ನು ಮುಚ್ಚಿಕೊಂಡು ದಿನದಿನಕ್ಕೂ ದಂಬಡಿ ಬಾರಿಸಿಕೊಂಡು ಕುಳಿತುಕೊಳ್ಳಬೇಕಾಗಿದೆ. ನಮ್ಮ ಹಣೆ ಬರಹ, ಈಗ ಉಳಿದಿರುವುದು ಇಷ್ಟೇ. ರೇಷ್ಮೆ ಬೆಳೆಯ ಉದ್ಯಮದ ಉನ್ನತಿಗಾಗಿ ವಿಶ್ವಬ್ಯಾಂಕ್‌ನಿಂದ ಅನೇಕರೀತಿಯ ಸಹಕಾರ ಸಹಾಯವನ್ನು ಪಡೆದಿದ್ದಾರೆ. ಈ ವಿಶ್ವಬ್ಯಾಂಕಿನಿಂದ ಬಂದಂಥ ನೆರವಿನಿಂದ ಅನುಕೂಲವಾಗಿದೆಯೇ? ಯಾವ ರೈತರಿಗೆ ರೇಷ್ಮೆ ಬೆಳೆ ಯಾತಕ್ಕೆ ರೈತರಿಗೆ ಏನು ಅನುಕೂಲವಾಗಲಿಲ್ಲ. ಸುಮ್ಮನ್ನೆ ದೊಡ್ಡ ದೊಡ್ಡ ಬಿಲ್ಡಿಂಗ್‌ಗಳನ್ನು, ಮನೆಗಳನ್ನು ಕಟ್ಟಿಸಿ ಅದರ ಮುಂದೆ ನಾಮಫಲಕ ಹಾಕಲಾಗಿದೆಯೇ ಹೊರತು ರೇಷ್ಮೆ ಬೆಳೆಯತಕ್ಕಂಥ ರೈತರಿಗೆ ವಿಶ್ವಬ್ಯಾಂಕ್‌ನಿಂದ ಬಂದಿರತಕ್ಕಂಥ ಸಹಾಯವನ್ನು ಕೊಡಲು ನಿಮಗೆ ಚಿಂತನೆ ಇದೆಯೋ ಅದನ್ನು ಹೇಳಿ. ಮಾನ್ಯ ಅಧ್ಯಕ್ಷರೇ ಇದಕ್ಕೆ ರೋಗದ ಮೇಲೆ ರೋಗ ತಗಲಿದೆ. ತಗುಲಿರತಕ್ಕ ರೋಗವನ್ನು ವಾಸಿಮಾಡತಕ್ಕಂಥ ಶಕ್ತಿ ಇವರಿಗೆ ಬರಲಿಲ್ಲ. ಹೂಜಿ ನೊಣದ ರೋಗವೆಂದು ಬಂದಿದೆ. ಈ ಹೂಜಿ ನೊಣದ ರೋಗವನ್ನು ತಡೆಗಟ್ಟಲಿಕ್ಕೆ ಆಗಲಿಲ್ಲ. ಹೂಜಿ ನೊಣದ ರೋಗವನ್ನು ಹೋಗಲಾಡಿಸಬೇಕೆಂದರೆ ಅದಕ್ಕೆ ಸುತ್ತ ನೀವು ಸೊಳ್ಳೆ ಪರದೆಯನ್ನು ಕಟ್ಟಿಕೊಳ್ಳಿ, ಸೊಳ್ಳೆ ಪರದೆ ಹಾಕಿ ಒಳಗಡೆ ಹೋಗಿ ತಾವು ಹುಳುವನ್ನು ಸಾಕಬೇಕು ಎಂದು ಹೇಳಿದರು. ಈ ಹೂಜಿ ನೊಣ, ಸುಮಾರು ೬೦ ಭಾಗ ಹಣ್ಣು ಹುಳುವಿನ ಶಕ್ತಿಯನ್ನು ಕಡಿಮೆ ಮಾಡುತ್ತದೆ. ರೇಷ್ಮೆ ಉತ್ಪಾದನೆ ಮಾಡತಕ್ಕಂಥ ಆ ಹಣ್ಣು ಹುಳುವಿನ ಶರೀರದ ೬೦ಭಾಗ ಶಕ್ತಿಯನ್ನು ತಿಂದುಹಾಕುತ್ತದೆ. ಇದು ಮತ್ತೆ ಹೊರಗಡೆ ಬಂದಾಗ ಚಂದ್ರಿಕೆಯಲ್ಲಿ ಹುಳು ಗೂಡನ್ನು ಕಟ್ಟುವಾಗ ಅದರ ಮೇಲೆಯೂ ಎರಗಿ ಅದು ಶಕ್ತಿಯುತವಾದ ಗೂಡನ್ನು ಕಟ್ಟುವುದಕ್ಕೂ ಬಿಡುವುದಿಲ್ಲ. ಆದರಿಂದ ಇದರ ತೂಕ ಕಡಿಮೆಯಾಗುತ್ತದೆ. ೫೦ ಭಾಗದಷ್ಟು ತೂಕ ಇದರಿಂದ ಕಡಿಮೆಯಾಗುತ್ತದೆ. ನಮ್ಮ ಮುನಿಯಪ್ಪನವರು ಮಂತ್ರಿಗಳಾದ ಮೇಲೆ ಗಂಟು ರೋಗ ಬಂತು.

ಶ್ರೀ ಎಸ್. ಮುನಿಯಪ್ಪ:- ಇದು ಅನಾದಿ ಕಾಲದಿಂದಲೂ ಇದೆ. ಮನುಷ್ಯ ಹುಟ್ಟುವುದಕ್ಕೆ ಮುಂಚಿತವಾಗಿಯೇ ಹುಟ್ಟಿರತಕ್ಕಂಥರೋಗ.

ಶ್ರೀ ವಾಟಾಳ್‌ನಾಗರಾಜ್:- ಸತ್ಯಹರಿಶ್ಚಂದ್ರನ ಕಾಲದಿಂದ, ಅನಾದಿ ಎಂದರೆ ಯಾವುದು ? ಈ ಗಂಟು ರೋಗ ಇವೆಲ್ಲ ಎಲ್ಲಿಂದ ಬಂದವು. ಈ ರೋಗಗಳು ಬಂದು ಇವತ್ತು ಯಾವ ಚೀಣಾದಿಂದ ರೇಷ್ಮೆಯನ್ನು ತರಿಸುತ್ತಿದ್ದಿರಿ ಅದೇ ದೇಶದಿಂದ ಬಾಂಗ್ಲ ದೇಶಕ್ಕೆ ಬಂದು, ಅಲ್ಲಿಂದ ಪಶ್ಚಿಮ ಬಂಗಾಳಕ್ಕೆ ಬಂದು, ಕರ್ನಾಟಕಕ್ಕೆ ಬಂದಿದೆ. ಈ ಹೂಜಿ ನೊಣದ ರೋಗ. ಈ ರೋಗವನ್ನು ಸಂಪೂರ್ಣವಾಗಿ ಹೋಗಲಾಡಿಸುವುದಕ್ಕೆ ವ್ಯವಸ್ಥೆ ಏನಾದರೂ ಇದೆಯೇ? ವ್ಯವಸ್ಥೆ ಏನೂ ಇಲ್ಲ. ನನಗನ್ನಿಸುತ್ತದೆ ಒಂದು ಕಡೆ ಈ ರೋಗದ ತೊಂದರೆ ಮತ್ತೊಂದುಕಡೆ ಬೆಲೆ ಕಡಿಮೆಯಾಗಿ ೩೦೦-೩೫೦-೪೦೦ ರೂಪಾಯಿಗಳಿಗೆ ಗೂಡನ್ನು ಮಾರಾಟ ಮಾಡಿ ಗರಿಗರಿನೋಟನ್ನು ಹಾಕಿಕೊಂಡು ಹೋಗುತ್ತಿದ್ದ ರೈತ, ಇವತ್ತು ೧೨೫ ರೂಪಾಯಿಗಳನ್ನು ತೆಗೆದು ಕೊಂಡು ಹೋಗುವ ಪರಿಸ್ಥಿತಿ ಬಂದಿದೆ.

ಒಬ್ಬ ಮಾನ್ಯ ಸದಸ್ಯರು:- ೧೫೦ ರೂಪಾಯಿಗಳಿಗೆ ಹೋಗಿದೆ.

ಶ್ರೀ ವಾಟಾಳ್‌ನಾಗರಾಜ್:- ನಮಗೂ ನಿಮಗೂ ಹೆಚ್ಚೇನೂ ಇಲ್ಲ ೫೦ ರೂಪಾಯಿ ವ್ಯತ್ಯಾಸ ಇರಬಹುದು. ಹೋಗಲಿ ನಾನು ಅಥಾರಿಟಿ, ನಮ್ಮ ಚಾಮರಾಜನಗರದಲ್ಲಿ ಮಾರ್ಕೆಟ್ ಇದೆ, ನಮ್ಮ ಟಿ.ನರಸೀಪುರದಲ್ಲಿಯೂ ಮಾರ್ಕೆಟ್ ಇದೆ. ಪಕ್ಕದಲ್ಲಿ ಒಬ್ಬರು ಅಥಾರಿಟಿ ಕುಳಿತಿಲ್ಲದೆ ಆದುದರಿಂದ ಅಥಾರಿಟಿ ಬಗ್ಗೆ ಏನೂ ಮಾತನಾಡುವುದಕ್ಕಾಗುವುದಿಲ್ಲ. ನಾನೇ ಅಥಾರಿಟಿ. ಇವತ್ತು ಒಂದು ನಿರ್ಧಾರಕ್ಕೆ ಬರೋಣ. ನಮ್ಮ ಎಲ್ಲರ ಒತ್ತಾಯವನ್ನು ತಾವು ಕೇಳಿದ್ದೀರಿ. ಸರ್ಕಾರ ಸದನದ ಸಮಿತಿ ಮಾಡಿ ಅಥವಾ ನಿಯೋಗ ಮಾಡಿ ದೆಹಲಿಗೆ ಕಳುಹಿಸಿ ಕೊಡಬೇಕೆಂದು ಕೇಳಿದ್ದೇವೆ. ಸರ್ಕಾರಕ್ಕೆ ಕೇಳಿದ್ದುದು ಒಂದು ಕಡೆ ಇರಲಿ. ತಾವು ಅಧ್ಯಕ್ಷರಾಗಿರುವುದರಿಂದ ತಮ್ಮಲ್ಲಿ ಮನವಿ ಮಾಡುತ್ತಿದ್ದೇವೆ. ಸದನದಲ್ಲಿ ನೇರವಾಗಿ ತಾವೇ ಸರ್ವ ಪಕ್ಷಗಳ ನಿಯೋಗವನ್ನು ಮಾಡಿ ಕೇಂದ್ರಕ್ಕೆ ಕಳುಹಿಸತಕ್ಕ ಅವಕಾಶ ತಮಗೆ ಇದೆ. ಇವರ ಬಗ್ಗೆ ಇನ್ನೂ ಮಾತನಾಡತಕ್ಕ ವಿಚಾರಗಳು ಬೇಕಾದಷ್ಟು ಇವೆ. ಇವತ್ತು ನಾಶದ ಅಂಚಿನಲ್ಲಿರುವ ರೇಷ್ಮೆ ಉದ್ಯಮವನ್ನು ಉಳಿಸುವುದಕ್ಕೆ ಮತ್ತು ಹೊರಗಿನಿಂದ ಬರತಕ್ಕ ರೇಷ್ಮೆಯನ್ನು ತಡೆಯಬೇಕೆಂದು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡುವುದಕ್ಕೋಸ್ಕರ ಸರ್ವ ಪಕ್ಷಗಳ ಪಕ್ಷಾತೀತವಾದ ನಿಯೋಗ ಹೋಗಬೇಕಾಗಿದೆ. ಮಹಾಜನ್ ವರದಿ ಬಂದಾಗ ಆಗಿನ ಅಧ್ಯಕ್ಷರೇ ಸದನದಲ್ಲಿ ನಿಯೋಗವನ್ನು ನೇಮಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದರು. ಸರ್ಕಾರಕ್ಕೆ ಮನಸ್ಸು ಇಲ್ಲದಿದ್ದರೆ, ಸರ್ಕಾರಕ್ಕೆ ಚಿಂತನೆ ಇಲ್ಲದಿದ್ದರೆ, ಸರ್ಕಾರಕ್ಕೆ ಹೃದಯ ಇಲ್ಲದಿದ್ದರೆ ತಮ್ಮನ್ನು ಕೇಳುತ್ತಿದ್ದೇನೆ, ದಯಮಾಡಿ ತಾವೇ ಸದನದಲ್ಲಿ ಒಂದು ಪಕ್ಷಾತೀತವಾದ ನಿಯೋಗವನ್ನು ನೇಮಿಸಿ ಕೇಂದ್ರಕ್ಕೆ ಕಳುಹಿಸಿಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಕಳಕಳಿಯಿಂದ ಮನವಿ ಮಾಡಿ ನನ್ನ ಮಾತು ಮುಗಿಸುತ್ತೇನೆ.

ಡಾ.ಜಿ. ಪರಮೇಶ್ವರ (ರೇಷ್ಮೆ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರು ಮತ್ತು ರೇಷ್ಮೆ ಖಾತೆಯ ಮಾಜಿ ಸಚಿವರಾಗಿದ್ದಶ್ರೀ ವೈ.ಕೆ. ರಾಮಯ್ಯನವರು ಇನ್ನಿತರ ಹಿರಿಯ ಸದಸ್ಯರಾದ ಬೈರೇಗೌಡರು, ವಾಟಾಳ್ ನಾಗರಾಜ್ ಅವರು, ವಿರೋಧ ಪಕ್ಷದ ಉಪನಾಯಕರಾದ ಸಿಂಧ್ಯರವರು ಬಹಳ ಪ್ರಾಮುಖ್ಯವಾದ ವಿಚಾರಗಳನ್ನು ಇವತ್ತಿನ ದಿವಸ ನಿಲುವಳಿ ಸೂಚನೆ ಮೂಲಕ ಪ್ರಸ್ತಾಪಮಾಡಿದ್ದಾರೆ. ಅವರು ಬಹಳಷ್ಟು ವಿಚಾರಗಳನ್ನು ಸದನಕ್ಕೆ ತಿಳಿಸಿಕೊಟ್ಟಿದ್ದಾರೆ. ಈ ರೇಷ್ಮೆ ಬೆಳೆಗಾರನ ಪರಿಸ್ಥಿತಿಯನ್ನು ಮತ್ತು ಈ ಕಸುಬಿನಲ್ಲಿ ಎಷ್ಟು ಜನ ಸೇರಿದ್ದಾರೆ ಎನ್ನುವುದನ್ನು ಒಬ್ಬೊಬ್ಬರು ಒಂದೊಂದು ರೀತಿಯ ಅಂಕಿಅಂಶಗಳನ್ನು ಕೊಟ್ಟು ಮಾತನಾಡಿದ್ದಾರೆ. ಅದು ಒಂದು ಕಡೆ ಇರಲಿ. ಸಂದರ್ಭ ಬಂದಾಗ ನಾನು ಸರಿಯಾದ ಅಂಕಿಅಂಶವನ್ನು ಕೊಡುತ್ತೇನೆ. ಅಷ್ಟೂ ಜನರ ಬಗ್ಗೆ ಎಲ್ಲರಿಗೂ ಚಿಂತನೆ ಇದೆ ಎಂದು ಅರ್ಥವಾಯಿತು. ಆದರೆ ನಮಗೆ ಚಿಂತನೆ ಇಲ್ಲವೆಂದು ತಿಳಿದುಕೊಳ್ಳಬೇಡಿ. ಮಾತನಾಡಿದ

ಸದಸ್ಯರುಗಳು ಸರ್ಕಾರ ನೀತಿಯನ್ನು ಮಾಡುವುದರಲ್ಲಿ ತಪ್ಪು ಮಾಡಿದೆ ಎಂದು ಹೇಳಿದ್ದಾರೆ. ಆಂದಮೇಲೆ ನಮಗೇ ಅಂದಹಾಗೆ ಆಯಿತು.

ಶ್ರೀ ವೈ.ಕೆ. ರಾಮಯ್ಯ:- ಪದ ಪ್ರಯೋಗ ಮಾಡುವಾಗ ಎಚ್ಚರಿಕೆ ವಹಿಸಿದ್ದೇನೆ. ಸರ್ಕಾರದ ತಪ್ಪು ನೀತಿಯಿಂದ ಎಂದು ಹೇಳಿದ್ದೇನೆಯೇ ಹೊರತು ರಾಜ್ಯ ಸರ್ಕಾರ ಎಂದು ಉಪಯೋಗಿಸಿಲ್ಲ. ಅವರ ಮೇಲೆ ಆರೋಪಮಾಡಿಲ್ಲ. ಪದವನ್ನು ಎರಡು ಸಾರಿ ಹೊಡೆದು ಬರೆದಿದ್ದೇನೆ. ಪದ ಪ್ರಯೋಗ ಮಾಡುವಾಗ ಈ ಪ್ರಶ್ನೆ ಬರುತ್ತದೆಂದು ನಿರೀಕ್ಷೆ ಮಾಡಿಯೇ ಸರ್ಕಾರದ ತಪ್ಪು ನೀತಿಯಿಂದ ಎಂದು ಹೇಳಿದ್ದೇನೆಯೇ ಹೊರತು ರಾಜ್ಯ ಸರ್ಕಾರದ ತಪ್ಪು ನೀತಿಯಿಂದ ಎಂದು ಬರೆದಿಲ್ಲ.

ಡಾ.ಜಿ. ಪರಮೇಶ್ವರ:- ಇಲ್ಲಿ ಬರೆದಿದ್ದೀರಿ. ಅದರ ಬಗ್ಗೆ ಚರ್ಚೆ ಬೇಡ. ಸರ್ಕಾರದ ತಪ್ಪು ನೀತಿಯಿಂದ ಎಂದು ಬರೆದಿದ್ದೀರೇ ಹೊರತು ಕೇಂದ್ರಸರ್ಕಾರದ್ದು ಎಂದು ಬರೆದಿಲ್ಲ. ಅದಕ್ಕಾಗಿ ಹೇಳಿದೆ ಅದರ ಬಗ್ಗೆ ಚರ್ಚೆ ಬೇಡ ಎಂದು. ಇನ್ನೊಂದು ಪ್ರಾಮುಖ್ಯವಾದ ವಿಚಾರವೇನೆಂದರೆ ನಾನು ಅಧಿಕಾರ ವಹಿಸಿಕೊಂಡ ೬ನೇ ದಿವಸದಲ್ಲಿ ಕೇಂದ್ರ ಸರ್ಕಾರಕ್ಕೆ ಇದರ ಬಗ್ಗೆ ಒಂದು ಪತ್ರ ಬರೆದಿದ್ದೇನೆ. ಇದರ ಪ್ರಾಮುಖ್ಯತೆ ಎಷ್ಟಿದೆ, ನಮ್ಮ ರೈತನಿಗೆ ಎಷ್ಟು ತೊಂದರೆಯಾಗುತ್ತಿದೆ, ಈ ಬೆಲೆ ಕುಸಿತದಿಂದ ನಮ್ಮ ರಾಜ್ಯದಲ್ಲಿರತಕ್ಕ ರೈತನಿಗೆ ಎಷ್ಟೊಂದು ತೊಂದರೆಯಾಗಿದೆ ಎನ್ನುವುದನ್ನು ನಾವು ನಮ್ಮ ರೇಷ್ಮೆ ಇಲಾಖೆಯಲ್ಲಿ ಮನಗಂಡಿದ್ದೇವೆ. ಇದರ ಬಗ್ಗೆ ಅಧಿಕಾರ ವಹಿಸಿಕೊಂಡ ೬ನೇ ದಿವಸಕ್ಕೆ ಕೇಂದ್ರದ ಮಂತ್ರಿಗಳಿಗೆ ಒಂದು ಪತ್ರ ಬರೆದಿದ್ದೇನೆ. ಏನು ಬರೆದಿದ್ದೇನೆಂದರೆ ಸಂಪೂರ್ಣವಾಗಿ ಯಾವುದೇ ಒಂದು ಕಾನೂನು ಇರಲಿ, ಯಾವುದೇ ಒಂದು ಅಗ್ರಿಮೆಂಟ್ ಇರಲಿ ತಾವು ಸಂಪೂರ್ಣವಾಗಿ ಈ ದೇಶಕ್ಕೆ ರೇಷ್ಮೆ ಆಮದು ಮಾಡಿಕೊಳ್ಳತಕ್ಕದ್ದನ್ನು ನಿಲ್ಲಿಸಬೇಕೆಂದು ಪತ್ರ ಬರೆದಿದ್ದೇನೆ. ತದನಂತರ ನಾನು ಕೇಂದ್ರದ ಜವಳಿ ಮಂತ್ರಿಯವರನ್ನು ಸಂಪರ್ಕಿಸಿ ನಮ್ಮ ಕಷ್ಟ ಈ ರೀತಿ ಇದೆ ಎಂದು ವಿವರಿಸಿದ್ದೇನೆ. ನಮ್ಮ ರೈತರು ಇವತ್ತಿನದಿವಸ ಬೀದಿಗೆ ಬರತಕ್ಕ ವಿಚಾರ ಇದೆ. ಆದುದರಿಂದ ತಾವು ಖುದ್ದಾಗಿ ಬೆಂಗಳೂರಿಗೆ ಬಂದು ನಮ್ಮಲ್ಲಿ ಯಾರು ಯಾರು ಈ ಕಸುಬಿನಲ್ಲಿರತಕ್ಕ ಜನರಿದ್ದಾರೆ ಅವರ ಜೊತೆ ಚರ್ಚೆಮಾಡಬೇಕು, ನಾವು ಎಷ್ಟು ಹೇಳಿದರೂ ನಿಮಗೆ ಕಿವಿಗೆ ಮುಟ್ಟುವುದಿಲ್ಲ ಎಂದಾಗ ಬಹಳ ದೊಡ್ಡ ಮನಸ್ಸು ಮಾಡಿ ಅವರು ಬಂದರು. ಅವರು ಬಂದಾಗ ನಾವು ಎಲ್ಲರನ್ನೂ, ಎಂದರೆ ರೆಪ್ರೆಸೆಂಟೇಟೀವ್ಸ್, ರೈತರನ್ನು, ರೀಲರ್ಸ್‌ನ್ನು, ವೀವರ್ಸ್‌ನ್ನು, ಟ್ರೇಡರ್ಸ್‌ನ್ನು ಅವರವರ, ಅಸೋಶಿಯೇಷನ್ಸ್, ಯೂನಿಯನ್ಸ್‌ನವರನ್ನು ಕರೆಯಿಸಿಕೊಂಡು ಮಾತನಾಡಿಸಿದೆವು. ಆಗ ಮಾನ್ಯ ವೈ.ಕೆ. ರಾಮಯ್ಯನವರೂ ಬಂದಿದ್ದರು. ಅವರೂ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಚರ್ಚೆ ಮಾಡಿದ್ದಾರೆ. ಚರ್ಚೆ ಮಾಡಿದ ನಂತರ ಕೇಂದ್ರದ ಮಂತ್ರಿಗಳು ಒಂದು ಆಶ್ವಾಸನೆಯನ್ನು ಕೊಟ್ಟರು. ಇದರ ಪ್ರಾಮುಖ್ಯತೆ ನನಗೆ ಅರ್ಥವಾಗಿದೆ. ಮುಂದಿನ ಬಡ್ಜೆಟ್ ಸೆಷನ್ ಏನು ಬರುತ್ತದೆಯೇ ಅಂತಹ ಸಂದರ್ಭದಲ್ಲಿ ಇದನ್ನು ಪರಿಶೀಲನೆ ಮಾಡಿ ಯಾವುದೇ ರೀತಿಯಲ್ಲಿ ಈ ಒಂದು ಕಸಬು. ಈ ಒಂದು ಕೈಗಾರಿಕೆ ಹಾಳಾಗದಹಾಗೆ ನೋಡಿಕೊಳ್ಳುತ್ತೇವೆಂದು ಆಶ್ವಾಸನೆಯನ್ನು ಕೊಟ್ಟು ಹೋಗಿದ್ದಾರೆ. ಆ ಕಾರಣಕ್ಕೆ ತಾವು ಏನು ನಿಲುವಳಿ ಸೂಚನೆಯನ್ನು ಮಂಡಿಸಿದ್ದೀರಿ ಅದರಲ್ಲಿ ಏನೂ ನನ್ನ ಭಿನ್ನಾಭಿಪ್ರಾಯ ಹೇಳುವುದಿಲ್ಲ. ಇದರ ಪ್ರಾಮುಖ್ಯತೆಯನ್ನು ನಾನು ಪ್ರಶ್ನೆ ಮಾಡುವುದಿಲ್ಲ. ನಿಮಗಿಂತಲೂ ಹೆಚ್ಚಿಗೆ ಕಾಳಜಿ ನಮಗೆ ಕೂಡ ಇದೆ. ಅದಕ್ಕಾಗಿ ಎಲ್ಲರೂ ಸೇರಿ ಪ್ರಯತ್ನ ಮಾಡೋಣ ಎನ್ನುವ ಮಾತನ್ನು ಹೇಳಿ, ಮಾನ್ಯ ಸಿಂಧ್ಯಾ ಅವರು ಮೂರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದೀರಿ. ಅವು ಒಳ್ಳೆಯ ಸಲಹೆಗಳು. ಎಲ್ಲರೂ ಈ ಮಾತನ್ನು ಹೇಳಿದ್ದಾರೆ. ಒಂದು ಸದನದ ನಿಯೋಗವನ್ನು ಕಳುಹಿಸಬೇಕೆಂದು ಹೇಳಿದ್ದೀರಿ. ನಮ್ಮ ನಿಮ್ಮ ಎಲ್ಲರ ಪ್ರಯತ್ನ ಒಂದೇ ಆಗಿರುವುದರಿಂದ ದೆಹಲಿಗೆ ಹೋಗಿ ಕೇಂದ್ರ ಸರ್ಕಾರಕ್ಕೆ ಒತ್ತಡ ತಂದು ಈ ನೀತಿ ಬದಲಾವಣೆ ಮಾಡುವುದಕ್ಕೆ ಹೇಳುವುದರಲ್ಲಿ ಯಾವುದೇ ತಪ್ಪು

ಆಗಲಾರದು. ನಾನು ಈ ಒಂದು ನಿಯೋಗವನ್ನು ಕಳುಹಿಸುವುದಕ್ಕೆ ಒಪ್ಪಿಕೊಳ್ಳುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ. ಇನ್ನು ಅನೇಕ ವಿಚಾರಗಳನ್ನು ಚರ್ಚೆಯ ಸಂದರ್ಭದಲ್ಲಿ ಹೇಳಿದ್ದೀರಿ. ರೋಗದ ಬಗ್ಗೆ, ಮಾರ್ಕೆಟಿಂಗ್ ಬಗ್ಗೆ ಹೇಳಿದ್ದೀರಿ. ಬೇರೆ ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ. ಅದನ್ನೆಲ್ಲಾ ಬಹುಶಃ ಡಿಮ್ಯಾಂಡ್ ಬಂದಾಗ, ಬೇರೆ ಸಂದರ್ಭದಲ್ಲಿ ತೆಗೆದುಕೊಳ್ಳಬೇಕೆನ್ನುವ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೈ.ಕೆ. ರಾಮಯ್ಯ: ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೇಂದ್ರ ಸರ್ಕಾರದ ಹೊಣೆ ಇದೆ ಎಂದು ಹೇಳಿದ್ದಾರೆ. ಬಹುಶಃ ನಾನು ಮಾತನಾಡುವಾಗ ಅವರ ಗಮನಕ್ಕೆ ತರಬೇಕಾಗಿತ್ತು. ಕೇಂದ್ರ ಸರ್ಕಾರದವರು ಹೊರದೇಶದಿಂದ ರೇಷ್ಮೆ ಆಮದನ್ನು ಮಾಡಿಸುವುದು ಅವರ ಜವಾಬ್ದಾರಿ. ಅವರ ಮೇಲೆ ನಾವು ಒತ್ತಡ ತರೋಣ, ನಿಯೋಗ ಕಳಿಸುವುದಕ್ಕೆ ಏರ್ಪಾಡು ಮಾಡುತ್ತೇನೆಂದು ಹೇಳಿದರು. ಇದು ಇಷ್ಟಕ್ಕೇ ನಿಂತರೆ ಆಗುವುದಿಲ್ಲ. It does not mean that the State Government is helpless. ನಾವು ಅಸಹಾಯಕರಲ್ಲ, ನಾನು ತಮ್ಮನ್ನು ಕೇಳುತ್ತೇನೆ. ನಮ್ಮದೇ ಆದ ಎನ್‌ಫೋರ್ಸ್‌ಮೆಂಟ್ ವಿಂಗ್ ಇದೆ. ಒಂದು ಪ್ರಶ್ನೆ ಕೇಳುತ್ತೇನೆ. ಬೆಂಗಳೂರಿನಲ್ಲಿ ೨೦೦೦ ಟನ್ ಚೈನಾ ಸಿಲ್ಕ್ ಉಪಯೋಗ ಮಾಡುವ ಪ್ರಯತ್ನ ನಡೆಯುತ್ತಿದೆ. ನಿಮ್ಮ ಎನ್‌ಫೋರ್ಸ್‌ಮೆಂಟ್ ವಿಂಗ್‌ನವರು ಎಷ್ಟು ಸಿಲ್ಕ್‌ನ್ನು ಸೀಸ್ ಮಾಡಿದ್ದಾರೆ? ಯಾರು ಪರವಾನಿಗೆ ಇಲ್ಲದೇ ಇಟ್ಟುಕೊಂಡಿದ್ದಾರೆ, ಎಷ್ಟು ಜನರ ಪರವಾನಿಗೆಯನ್ನು ರದ್ದು ಮಾಡಿದ್ದೀರಿ ? ಎನ್‌ಫೋರ್ಸ್‌ಮೆಂಟ್ ವಿಂಗ್ ಹೊರದೇಶದಿಂದ ಬಂದ ರೇಷ್ಮೆಯನ್ನು ಕಂಡುಹಿಡಿದು ಕ್ರಮವನ್ನೇನಾದರೂ ತೆಗೆದುಕೊಂಡಿದೆಯೇ ? ತೆಗೆದುಕೊಂಡಿದ್ದರೆ ಎಷ್ಟು ಜನರ ಮೇಲೆ ತೆಗೆದುಕೊಂಡಿದ್ದಾರೆ ? ಕೇಂದ್ರ ಸರ್ಕಾರದವರು ಆಮದು ಮಾಡುವುದನ್ನು ನಿಲ್ಲಿಸಿ ಎಂದರೆ ಆಗುವುದಿಲ್ಲ. ನಿಮ್ಮ ಎನ್‌ಫೋರ್ಸ್‌ಮೆಂಟ್ ವಿಂಗ್‌ನ್ನು ಟೈಟನ್ ಮಾಡಬೇಕಾಗುತ್ತದೆ. ಇದರ ಬಗ್ಗೆ ಹೇಳಬೇಕು.

ಶ್ರೀ ಸಿ.ಬೈರೇಗೌಡ:- ನಿಯೋಗ ತೆಗೆದುಕೊಂಡು ಹೋಗುವುದಕ್ಕೆ ಸರ್ಕಾರ ತಯಾರಿದೆ. ಇವತ್ತಿನದಿವಸ ಇಲ್ಲಿ ಅವಿರೋಧ ತೀರ್ಮಾನ ಮಾಡಬೇಕು. ರೇಷ್ಮೆ ತರಿಸುವುದನ್ನು ತಕ್ಷಣನಿಲ್ಲಿಸಬೇಕೆಂದು ತೀರ್ಮಾನ ಮಾಡಿದರೆ, ನಿಯೋಗ ಹೋಗಿ ಇನ್ನೂ ಹೆಚ್ಚಿನ ಒತ್ತಡವನ್ನು ತರುವುದಕ್ಕೆ ನಮಗೆ ಸಾಧ್ಯವಾಗುತ್ತದೆ. ಮಾನ್ಯ ಮಂತ್ರಿಗಳೇ ಒಂದು ನಿರ್ಣಯವನ್ನು ತರಬೇಕು. ಇದು ರಾಜ್ಯ ಸರ್ಕಾರದ ಕಳಕಳಿಯನ್ನು ತೋರಿಸುತ್ತದೆ. ಆ ಕೆಲಸವನ್ನು ದಯವಿಟ್ಟು ಮಾಡಿ.

೪.೨೫ ಪಿ.ಎಂ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ನಿಯೋಗ ಹೋಗುತ್ತೇವೆಂದು ಹೇಳಿರತಕ್ಕದ್ದು..

MR. SPEAKER: No further discussion..

ಶ್ರೀ ವಾಟಾಳ್ ನಾಗರಾಜ್: ತಾವು ಇಂಗ್ಲೀಷ್‌ನಲ್ಲಿ ಈ ತರಹ ಉತ್ತರ ಕೊಟ್ಟರೆ ನಮ್ಮ ಹಣೆಯಬರಹವೇನು ?

ಅಧ್ಯಕ್ಷರು: ಇದರ ಮೇಲೆ ಬಹಳ ಚರ್ಚೆಯಾಗಿದೆ. ಅವರು ಉತ್ತರ ಕೊಡುತ್ತಿದ್ದಾರೆ ಕೊಟ್ಟು ಆಗಿದೆ.

ಶ್ರೀವಾಟಾಳ್ ನಾಗರಾಜ್: ಮಂತ್ರಿಗಳು ಉತ್ತರವನ್ನು ಜಾಸ್ತಿಕೊಡಿಯೆಂದು ನಾನು ಕೇಳಲಿಲ್ಲ. ಅವರು ಉತ್ತರ ಕೊಟ್ಟಿದ್ದು ಸಾಕು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅವರು ಚೊಕ್ಕವಾಗಿ ಚೆನ್ನಾಗಿ ಹೇಳಿದ್ದಾರೆ, ಒಂದು ಮಾತು ಅವರು ಯಾವಾಗ ನಿಯೋಗಕ್ಕೆ

ಒಪ್ಪಿದ್ದಾರೆ ಅದಕ್ಕೆ ಒಂದು ನಿರ್ಣಯ ಮಾಡಿಬಿಡೋಣವೆಂದು ಅಷ್ಟೆ. ಇದರಲ್ಲಿ ನಮ್ಮದೇನೂ ಇಲ್ಲ.

ಡಾ: ಜಿ. ಪರಮೇಶ್ವರ: ನಿಯೋಗ ಹೋಗುವುದರಿಂದ ನಿರ್ಣಯದ ಅವಶ್ಯಕತೆ ಏನೂ ಬೇಕಾಗುವುದಿಲ್ಲ. ಏಕೆಂದರೆ ನಾವೇ ಖುದ್ದಾಗಿ ಭೇಟಿಯಾಗಿ ಎಲ್ಲಾ ವಿಚಾರವನ್ನು ಮುಟ್ಟಿಸಿ ಹೇಳುವುದರಿಂದ ನಿರ್ಣಯದ ಅವಶ್ಯಕತೆ ಇಲ್ಲ. ಅದರಲ್ಲೂ ನಾವು ಸಮರ್ಥರಾಗದಿದ್ದರೆ ಅಂತಹ ಸಂದರ್ಭದಲ್ಲಿ ನಾವು ರೆಸಲ್ಯೂಷನ್ ಮಾಡಿದರೆ ತಪ್ಪೇನೂ ಆಗುವುದಿಲ್ಲ. ಮಾನ್ಯ ವೈ.ಕೆ.ರಾಮಯ್ಯನವರು ನಮ್ಮ ಎನ್‌ಫೋರ್ಸ್‌ಮೆಂಟ್ ವಿಂಗ್ ಸ್ವಲ್ಪ ವೀಕ್ ಇದೆಯೆಂದು ಹೇಳಿದರು. ಅದರ ಬಗ್ಗೆಯೂ ಕೂಡ ನಾವು ಪ್ರಯತ್ನ ಮಾಡುತ್ತಿದ್ದೇವೆ, ಆಕ್ಟ್‌ನಲ್ಲಿ ಲೂಪೋಲ್ಸ್, ಲಕೂನ ಇದೆ. ಅದರ ಬಗ್ಗೆ ಅಮೆಂಡ್‌ಮೆಂಟ್ ತರಬೇಕೆನ್ನುವ ಮನಸ್ಸು ಇದೆ. ಅದರ ಜೊತೆಗೆ ಏನು ಕೆಲಸ ಆಗುತ್ತಿಲ್ಲವೆಂದರು. ತಮಗೆ ನಾನು ಸಂದರ್ಭ ಬಂದಾಗ ಅಂಕಿಅಂಶಗಳನ್ನು ಕೊಡುತ್ತೇನೆ. ಅವರು ಎಷ್ಟು ಜನರನ್ನು ಹಿಡಿದಿದ್ದಾರೆ, ಎಷ್ಟು ಸೀಸ್ ಮಾಡಿದ್ದಾರೆ ಎಷ್ಟು ಜನರ ಮೇಲೆ ಕೇಸ್ ಬುಕ್ ಮಾಡಿದ್ದಾರೆ, ತಾವು ಮಂತ್ರಿಗಳಾಗಿದ್ದೀರಿ ತಮಗೂ ಗೊತ್ತಿದೆ. ಅದೆಲ್ಲವನ್ನು ಕೂಡ ನಾನು ಸಂದರ್ಭ ಬಂದಾಗ ಅಂಕಿಅಂಶಗಳನ್ನು ನಿಮಗೆ ಕೊಡುತ್ತೇನೆ. ಆದರೆ ಈಗ ಇಷ್ಟಕ್ಕೆ ಮಾತ್ರ ಸೀಮಿತವಾಗಿ ಕೆಲಸವನ್ನು ಮಾಡೋಣವೆಂದು ಹೇಳುತ್ತೇನೆ.

ಶ್ರೀ ವೈ.ಕೆ.ರಾಮಯ್ಯ: ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಪ್ರಶ್ನೆ. ಬಹಳ ಪ್ರಮುಖವಾದುದು. ಕೊನೆಯ ಪ್ರಶ್ನೆ , ಉದ್ದೇಶ ಸಾಧನೆ ಆಗದಿದ್ದರೆ ನಾನು ಏಕೆ ಕಂಠ ಶೋಷಣೆ ಮಾಡಿಕೊಳ್ಳಲಿ? ಕೊನೆಯ ಪ್ರಶ್ನೆ ದಯಮಾಡಿ ಅವಕಾಶ ಮಾಡಿಕೊಡಿ. ಬಹಳ ಪ್ರಮುಖವಾದುದು.

ಅಧ್ಯಕ್ಷರು: ಮಾನ್ಯಸದಸ್ಯರು ಈ ವಿಷಯವನ್ನು ಬಜೆಟ್ ಅಧಿವೇಶನದಲ್ಲಿ ಸಾಕಷ್ಟು ಪ್ರಸ್ತಾಪ ಮಾಡಲಿಕ್ಕೆ ಕಾಲಾವಕಾಶ ಮಾಡಿಕೊಡುತ್ತೇನೆ.

ಶ್ರೀ ವೈ.ಕೆ. ರಾಮಯ್ಯ: ಮಾನ್ಯಅಧ್ಯಕ್ಷರೆ, ಉದ್ದೇಶ ಸಾಧನೆಯಾಗಬೇಕು. ಕೆಎಸ್‌ಎಂಬಿ ಮುಖಾಂತರ ಎಷ್ಟು ಪರ್ಚೇಸ್ ಮಾಡುತ್ತಾರೆಂದು ಕೇಳಿ? ಸಬ್ ಸ್ಟ್ಯಾಂಡರ್ಡ್ ರೇಟ್ ನಲ್ಲಿ ಕೆಎಸ್‌ಎಂಬಿ ಮುಖಾಂತರ ಅವರು ಎಷ್ಟು ಪರ್ಚೇಸ್ ಮಾಡುತ್ತಾರೆಂದು ಹೇಳಬೇಕು. ಇದು ಬಹಳ ಪ್ರಾಮುಖ್ಯವಾದುದು ದಯಮಾಡಿ ಅವಕಾಶಕೊಡಿ.

ಅಧ್ಯಕ್ಷರು: ಅಮದು ವಿಷಯದ ಬಗ್ಗೆ ಮಾತುಕಥೆ ಇದೆ. ಈ ವಿಷಯವನ್ನು ಬಜೆಟ್ ಅಧಿವೇಶನದಲ್ಲಿ ಚರ್ಚೆ ಮಾಡಿ.

ಶ್ರೀ ವೈ.ಕೆ.ರಾಮಯ್ಯ: ಬೆಲೆ ಬಿದ್ದುಹೋದಾಗ, ಕೆಎಸ್‌ಎಂಬಿ ಮುಖಾಂತರ ಎಷ್ಟು ಪರ್ಚೇಸ್ ಮಾಡುತ್ತಾರೆ ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಹೇಳಿ.

ಅಧ್ಯಕ್ಷರು: ನಾನು ನನ್ನ ನಿರ್ಣಯವನ್ನು ಹೇಳಿಬಿಡುತ್ತೇನೆ.

> "ಮಾನ್ಯ ವೈ.ಕೆ.ರಾಮಯ್ಯನವರು ಮತ್ತು ಉಳಿದ ಪಕ್ಷದ ಸದಸ್ಯರಾದ ಮಾನ್ಯ ಬೈರೇಗೌಡರು ವಾಟಾಳ್‌ನಾಗರಾಜ್‌ರವರು, ಸಿಂಧ್ಯಾರವರು ರೇಷ್ಮೆ ಬೆಲೆ ಕಡಿಮೆಯಾಗಿರುವ ಬಗ್ಗೆ ನಿಲುವಳಿ ಸೂಚನೆಗೆ ಅನುಮತಿಯನ್ನು ಕೋರಿ ಪೂರ್ವಭಾವಿ ಚರ್ಚೆಗೆ ಸರ್ಕಾರದವರು ಉತ್ತರವನ್ನು ನೀಡಿರುವ ಹಿನ್ನೆಲೆಯಲ್ಲಿ ಈ ನಿಲುವಳಿ ಸೂಚನೆಗೆ ಅನುಮತಿಯನ್ನು ನಿರಾಕರಿಸಿದ್ದೇನೆ".